ಗಿಡಮರಬಳ್ಳಿಗಳ ನೀತಿ ಕಥೆಗಳು

ಮಕ್ಕಳಿಗಾಗಿ

ಪ್ರೊ. ಜಿ. ಅಶ್ವತ್ಥನಾರಾಯಣ



ವಸು
ಪ್ರಕಾಶನ, ಬೆಂಗಳೂರು


ಗಿಡಮರಬಳ್ಳಿಗಳ ನೀತಿ ಕಥೆಗಳು
ಮಕ್ಕಳಿಗಾಗಿ
47
ಪ್ರೊ. ಜಿ. ಅಶ್ವತ್ಥನಾರಾಯಣ
ವಸು

Gidamaraballigala Neeti Kathegalu
Collection of children's stories
Written by : Prof. G. Aswathanarayana

Published by : Vasu Prakashana
102 S.L.V. Shruthi, 7th Cross
Vyasaraja Road Bengaluru - 560068
Mob : 8792693438
ISBN No : 978-81-996404-2-9

ಗಿಡಮರಬಳ್ಳಿಗಳ ನೀತಿ ಕಥೆಗಳು
ಲೇಖಕರು : ಪ್ರೊ. ಜಿ. ಅಶ್ವತ್ಥನಾರಾಯಣ

ಪ್ರಕಾಶಕರು : ವಸು ಪ್ರಕಾಶನ
102 ಎಸ್.ಎಲ್.ವಿ. ಶ್ರುತಿ, 7ನೇ ಕ್ರಾಸ್,
ವ್ಯಾಸರಾಜ ರಸ್ತೆ, ಬೆಂಗಳೂರು – 560068
ಮೊ. : 8792693438
ಮುದ್ರಣ : 2025
ಪ್ರತಿಗಳು : 1000
ಬಳಸಿದ ಕಾಗದ : 1/4 ಕ್ರೌನ್ 80 ಜಿ.ಎಸ್.ಎಂ., ಎನ್.ಎಸ್. ಮ್ಯಾಪ್‌ಲಿಥೋ
ಪುಟಗಳು : 60+2 = 62
ಬೆಲೆ : ರೂ. 145/–
ಮುಖಪುಟ ಮತ್ತು ಒಳಪುಟ ಚಿತ್ರ ವಿನ್ಯಾಸ : ಶಂಕರ ಬೆನ್ನೂರ
ಮುದ್ರಕರು : ಶ್ರೀ ಗಣೈಕ ಗ್ರಾಫಿಕ್ಸ್, ಬೆಂಗಳೂರು

ಲೇಖಕರ ಪರಿಚಯ :

ಪ್ರೊ. ಜಿ. ಅಶ್ವತ್ಥನಾರಾಯಣ ಅವರು 12-5-1938 ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಅವರ ಶಿಕ್ಷಣ ಎಂ.ಎ., ಕನ್ನಡ; ಎಂ.ಎ., ಸಮಾಜಶಾಸ್ತ್ರ; ಶಾಸನಶಾಸ್ತ್ರ ಡಿಪ್ಲೊಮಾ; ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ. ಅವರು ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಪದವಿ ಕಾಲೇಜುಗಳಲ್ಲಿ 30 ವರ್ಷಗಳ ಕಾಲ ಕನ್ನಡ ಅಧ್ಯಾಪಕ ಹಾಗೂ ಪ್ರಾಧ್ಯಾಪಕರಾಗಿ ಕನ್ನಡ ಬೋಧನಾ ಸೇವೆ ಸಲ್ಲಿಸಿ,1996ರಲ್ಲಿ ನಿವೃತ್ತಿ ಹೊಂದಿದರು.

ಇವರ ಕೃತಿಗಳು - 50 : ಕನ್ನಡ ಸಾಹಿತ್ಯ ಪರಿಷತ್ತು - 100, ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ದೇವುಡು ನರಸಿಂಹ ಶಾಸ್ತ್ರಿ, ಫ.ಗು. ಹಳಕಟ್ಟಿ, ಹು.ಮ ರಾಮಾರಾಧ್ಯ, ಉತ್ತಮ ಕ್ಷಮಾ, ವ್ಯವಾಹಾರಿಕ ಕನ್ನಡ, ಹೊಸಕೆರೆ ಚಿದಂಬರಯ್ಯನವರ ಜೀವನ ಚರಿತ್ರೆ ಇತ್ಯಾದಿ. ನೂರಾರು ಸಂಶೋಧನಾ ಲೇಖನಗಳಲ್ಲದೆ, ಹಲವು ಅನುವಾದ ಸಾಹಿತ್ಯ, ವಿಮರ್ಶಾ ಲೇಖನಗಳು ಮತ್ತು ಗಿಡ ಮರ ಬಳ್ಳಿಗಳ ನೀತಿ ಕಥೆಗಳನ್ನೂ ಬರೆದಿದ್ದಾರೆ. ಇಷ್ಟಲ್ಲದೆ ಸಾಕಷ್ಟು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುವುದಲ್ಲದೆ, ಮೌಲ್ಯಯುತ ಗ್ರಂಥ ಸಂಪಾದನೆ ಕೂಡಾ ಮಾಡಿದ್ದಾರೆ. ಇತ್ತೀಚೆಗೆ ಅವರ ಸಂಪಾದಿತ ಕೃತಿ 'ಕುಮಾರವ್ಯಾಸಭಾರತದ ಸೂಕ್ತಿ ಸಂಗ್ರಹ ಪ್ರಕಟಣೆಗೊಂಡಿದೆ.

ಅವರಿಗೆ ಲಭಿಸಿರುವ ಪ್ರಶಸ್ತಿಗಳು :

ಕುವೆಂಪು ಶ್ರೀ ಪ್ರಶಸ್ತಿ (2004)
ಗುರು ಗೋವಿಂದ ವಿಠಲ ದಾಸ ಸಾಹಿತ್ಯ ಪ್ರಶಸ್ತಿ (2007)
ಕನ್ನಡ ಶ್ರೀ ಪ್ರಶಸ್ತಿ (2008)
ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ (2011)
ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ (2012)
ಸುವರ್ಣ ವಸಂತ ಸಾಹಿತ್ಯ ಪ್ರಶಸ್ತಿ (2012)
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2013)
ಟ.ವಿ. ವೆಂಕಟಾಚಲ ಶಾಸ್ತ್ರಿ -ವಿದ್ವತ್ ಪ್ರಶಸ್ತಿ- 2023 - ಕನ್ನಡ ಸಾಹಿತ್ಯ ಪರಿಷತ್ತು,
ನಾಡಪ್ರಭು ಕೆಂಪೇಗೌಡ ಪ್ರಶಸ್ತಿ-2025 ಇತ್ಯಾದಿ.

ಇತ್ತೀಚೆಗೆ ಪೂಜ್ಯ ವೀರೇಶನಂದಾಸರಸ್ವತಿಯವರ ಮಾರ್ಗದರ್ಶನದಲ್ಲಿ, ಅ.ನಾಜಿಯವರ ಅಭಿನಂದನಾ ಗ್ರಂಥ "ಸಾಹಿತ್ಯ ಪರಿಚಾರಕ"ವನ್ನು ಸಹ ಹೊರ ತಂದು ಗೌರವಿಸಿದೆ. ಇದು ಅವರ ಸಾಹಿತ್ಯ ಸೇವೆಗೆ ಸಂದ ದೊಡ್ಡ ಗೌರವ.

ಕಥೆಗಾರನ ಮಾತು

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಸಾಕಷ್ಟು ಇಲ್ಲ. ಏಕೆಂದರೆ ಕನ್ನಡದಲ್ಲಿ ಕಥೆ ಹೇಳುವ ಕಲೆ ಎಲ್ಲರಲ್ಲೂ ಇರುವುದಿಲ್ಲ. ಮಕ್ಕಳಿಗೆ ಕಥೆ ಹೇಳುವುದು ಮಕ್ಕಳ ಒಡನಾಟ ಇದ್ದವರು ಹೇಳುವಂತೆ ಬೇರೆಯವರು ಹೇಳಲು ಸಾಧ್ಯವಿಲ್ಲ. ಪಂಜೆ, ಹೊಯ್ಸಳ, ದೇವುಡು ರಾಜರತ್ನಂ ಮೊದಲಾದ ಮಕ್ಕಳ ಸಾಹಿತಿಗಳು ಹೇಳಿದ ಕಥೆಗಳು, ಬರೆದ ಕಥೆಗಳು, ಇಂದೂ ಜನಪ್ರಿಯವಾಗಿವೆ. ಮಕ್ಕಳ ಮನಸ್ಸನ್ನು ಅರಿತು ಮಕ್ಕಳ ಭಾಷೆಯಲ್ಲಿ ಕಥೆ ಹೇಳಿದವರೂ ಕಥೆ ಬರೆದವರೂ ನಿಜವಾದ ಮಕ್ಕಳ ಸಾಹಿತಿಗಳು ಎನ್ನಿಸಿದ್ದಾರೆ. ಕನ್ನಡದಲ್ಲಿ ಪ್ರಾಣಿಪಕ್ಷಿಗಳ ಕಥೆಗಳು, ಒಳ್ಳೆಯ ಜನರ ಕೆಟ್ಟ ಜನರ ಕಥೆಗಳು, ಈ ಸೋಪನ ನೀತಿ ಕಥೆಗಳು, ಪಂಚತಂತ್ರದ ಕಥೆಗಳು, ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳ ಕಥೆಗಳು ಬೇಕಾದಷ್ಟಿವೆ. ಆ ಕಥೆಗಳನ್ನೆಲ್ಲಾ ಮಕ್ಕಳಿಗೆ ನೀತಿ ಪಾಠ ಕಲಿಸಲು ಬಳಸುತ್ತಾರೆ. ಆದರೆ ಗಿಡಮರ ಬಳ್ಳಿಗಳ ಮೂಲಕ ನೀತಿ ಪಾಠ ಹೇಳುವ ಕಥೆಗಳು ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಇದೆ. ಈ ಬಗೆಯ ಕತೆಗಳು ಪಾಶ್ಚಾತ್ಯ ಮಕ್ಕಳ ಸಾಹಿತ್ಯದಲ್ಲೂ ಕಡಿಮೆ ಇದೆ. ಅಮೇರಿಕದಲ್ಲಿ ನನ್ನ ಮೊಮ್ಮಗ ಆದಿತ್ಯನನ್ನು ನನ್ನ ಮಗಳು ಕ್ಷಮಾ ಲೈಬ್ರರಿಗೆ ಕರೆದೊಯ್ಯುತ್ತಿದ್ದಳು. ಅವನ ಜೊತೆ ನಾನೂ ಮಕ್ಕಳ ಪುಸ್ತಕ ಓದಲಿಕ್ಕೆ ಹೋಗುತ್ತಿದ್ದೆ. ಅಲ್ಲಿ ಒಂದು ಮುನಿಸಿಪಾಲಿಟಿ ಲೈಬ್ರರಿ (ಅಲ್ಲಿ ಕೌಂಟಿ ಲೈಬ್ರರಿ ಎನ್ನುತ್ತಾರೆ) ಸಹ ಎಷ್ಟು ಭವ್ಯವಾಗಿ ಅಚ್ಚುಕಟ್ಟಾಗಿ ಇರುತ್ತದೆ ಎಂದರೆ ಮಕ್ಕಳನ್ನಷ್ಟೇ ಅಲ್ಲ ದೊಡ್ಡವರ ಮನಸ್ಸನ್ನೂ ಸೆಳೆಯುತ್ತದೆ. ನಮ್ಮ ಶಾಲಾ ಕಾಲೇಜು ಲೈಬ್ರರಿಗಳನ್ನು ಹೋಲಿಸಲು ಸಾಧ್ಯವೇ ಇಲ್ಲ.

ಅಲ್ಲಿ ಮಕ್ಕಳ ಲೈಬ್ರರಿಯ ವಿನ್ಯಾಸವೇ ವಿಶೇಷವಾಗಿರುತ್ತದೆ. ಅಲ್ಲಿ ಯಾವುದೇ ಮಕ್ಕಳ ಪುಸ್ತಕ ಆಗಲಿ, ಸೊಗಸಾದ ಚಿತ್ರಗಳು, ಸರಳವಾದ ಭಾಷೆ, ಕುತೂಹಲದ ಕಥೆ ಆಕರ್ಷಕ ವಿವರಣೆ, ಒಳ್ಳೆಯ ಕಾಗದರಟ್ಟುಗಳಿಂದ ಕೂಡಿರುವ ಹರಿಯದಿರುವ ಕೊಳೆಯಾಗದಿರುವ ಪುಸ್ತಕಗಳು ಲೈಬ್ರರಿಯ ಮಕ್ಕಳ ವಿಭಾಗದಲ್ಲಿ ಕಂಡು ಬರುತ್ತವೆ. ಅಲ್ಲಿಯ ಪುಸ್ತಕಗಳೆಂದರೆ ಓದಲು ಆನಂದ, ನೋಡಲು ಖುಷಿ. ನಮ್ಮಲ್ಲಿ ಅಂಥ ಮಕ್ಕಳ ಪುಸ್ತಕ ಭಂಡಾರಗಳು ಎಷ್ಟಿವೆ? ಎಲ್ಲಿವೆ? ಅಲ್ಲಿ ಮೊಮ್ಮಕ್ಕಳಿಗೆ ಕಥೆ ಹೇಳಲು ಪುಸ್ತಕಗಳನ್ನು ಓದುತ್ತಿದಾಗ ಗಿಡ ಮರ ಬಳ್ಳಿಗಳ ಮೂಲಕ ನೀತಿ ಪಾಠಗಳನ್ನು ಹೇಳುವ ಪುಸ್ತಕವೊಂದು ಕಣ್ಣಿಗೆ ಬಿತ್ತು. ಅದನ್ನು ಓದಿದಾಗ ಬಹಳ ಆನಂದವಾಯಿತು. ನಮ್ಮಲ್ಲಿ ಅಂಥ ಪುಸ್ತಕ ಇಲ್ಲವಲ್ಲ ಎಂದು ಮನಸ್ಸು ಮರುಗಿತು. ಆಗ ನಾನು ಮೆಚ್ಚಿದ ಕಥೆಗಳ ಬಗ್ಗೆ ಟಿಪ್ಪಣಿ ಮಾಡಿಕೊಂಡೆ. ಆ ಕಥೆಗಳ ಸ್ಫೂರ್ತಿಯಲ್ಲಿ ನಮ್ಮ ಸಂಸ್ಕೃತಿ, ಕಲೆ, ಸಾಹಿತ್ಯದ ಭಾಷೆಗೆ ಒಗ್ಗುವಂತೆ ನಮ್ಮ ಮಕ್ಕಳಿಗೆ ಪ್ರಿಯವಾಗುವಂತೆ ಗಿಡ ಮರ ಬಳ್ಳಿಗಳ ಮಕ್ಕಳ ನೀತಿ ಕಥೆಗಳನ್ನು ಬರೆಯಬೇಕೆಂದು ನಿರ್ಧರಿಸಿದೆ. ಆ ಪ್ರಯತ್ನದ ಫಲವೇ ಈಗ ನಿಮ್ಮ ಮುಂದಿರುವ ಪುಸ್ತಕ. ಇಲ್ಲಿಯ ಕಥೆಗಳನ್ನು ಓದಿ ಮೆಚ್ಚುಗೆ ಸೂಚಿಸಿದವರು ತಮ್ಮ ಮಲ್ಲಾರ ಪತ್ರಿಕೆಯಲ್ಲಿ ಪ್ರಕಟಿಸಿದವರು ಪ್ರಸಿದ್ಧ ಪತ್ರಕರ್ತರೂ, ಸಂಪಾದಕರೂ, ಆತ್ಮೀಯ ಮಿತ್ರರೂ ಆದ ಬಾಬುಕೃಷ್ಣಮೂರ್ತಿ ಅವರು.ಇದುವರೆಗೆ ಕನ್ನಡದಲ್ಲಿ ಈ ರೀತಿಯ ಸಸ್ಯವರ್ಗದ ನೀತಿ ಕಥೆಗಳನ್ನು ಓದುತ್ತಿರುವುದು ಇದೇ ಮೊದಲು ಎಂದು ಅನೇಕರು ಹೇಳಿದ್ದಾರೆ. ಕನ್ನಡದಲ್ಲಿ ಈ ರೀತಿ ಮಕ್ಕಳ ನೀತಿ ಕಥೆಗಳು ಮಕ್ಕಳಿಗೂ ಸಂತೋಷ ತಂದಿದೆ ಎಂದಿದ್ದಾರೆ. ಮಕ್ಕಳ ಸಾಹಿತ್ಯದಲ್ಲಿ ಆಸಕ್ತಿ ಹೊಂದಿ ತಮ್ಮ ವಸು ಪ್ರಕಾಶನದ ಮೂಲಕ ಸೊಗಸಾದ ಉಪಯುಕ್ತ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿರುವ ಪ್ರಕಾಶಕಿ, ವಸು ವತ್ಸಲೆ ಅವರು ಈ ಬಗೆಯ ಮಕ್ಕಳ ನೀತಿ ಕಥೆಗಳು ಕನ್ನಡಕ್ಕೆ ಹೊಸತು. ಈ ಕಥೆಗಳನ್ನು ನಾನು ಪ್ರಕಟಿಸುವೆ ಎಂದು ಮುಂದೆ ಬಂದಿದ್ದಾರೆ. ಅವರ ಈ ಮಕ್ಕಳ ಸಾಹಿತ್ಯ ಪ್ರೇಮ ಶ್ಲಾಘನೀಯವಾಗಿದೆ. ಕನ್ನಡದಲ್ಲಿ ಗಿಡ, ಮರ, ಬಳ್ಳಿಗಳ ಮಕ್ಕಳ ನೀತಿ ಕಥೆಗಳ ಸಂಗ್ರಹ ಗ್ರಂಥ ಪ್ರಕಟವಾಗುತ್ತಿರುವುದು ಇದೇ ಮೊದಲು ಎಂದು ತಾಯಿ ತಂದೆಯರು, ಅಧ್ಯಾಪಕರು, ವಿದ್ಯಾರ್ಥಿಗಳು ಈ ಕಥೆಗಳನ್ನು ಓದಿ ಮೆಚ್ಚಿ ನಲಿಯುತ್ತಾರೆ ಎಂದು ನಂಬಿದ್ದೇನೆ.

18.01.2025 ಬೆಂಗಳೂರು
ಫೋನ್ 080–26637783

ಜಿ. ಅಶ್ವತ್ಥನಾರಾಯಣ
ಲೇಖಕ

ಪ್ರಕಾಶಕರ ನುಡಿ

ಮಕ್ಕಳ ಸಾಹಿತ್ಯದಲ್ಲಿ ಇತರೆ ಪ್ರಕಾರಗಳಿಗಿಂತ, ಕಥನ ಸಾಹಿತ್ಯವು ಅತ್ಯಂತ ಪ್ರಮುಖವಾದ ಸ್ಥಾನವನ್ನು ಹೊಂದಿದೆ. ಕತೆಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲದೆ, ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ದೊಡ್ಡ ಪಾತ್ರವನ್ನೇ ವಹಿಸುತ್ತದೆ. ಅದು ಭಾಷೆ, ಸಂವಹನ ಶೈಲಿ, ವ್ಯವಹಾರ ಜ್ಞಾನ ಯಾವುದೂ ಇರಬಹುದು. ಅಂದರೆ ಕಥೆಗಳ ಮೂಲಕ ಮಕ್ಕಳಿಗೆ ಹೊಸ ಪದಗಳ ಪರಿಚಯವಾಗುತ್ತದೆ. ವಾಕ್ಯ ರಚನೆ, ಭಾಷೆಯ ಸೊಗಡು ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ರೀತಿ ಸುಲಭವಾಗಿ ಅರ್ಥವಾಗುತ್ತದೆ. ಜೊತೆಗೆ ಕತೆಗಳಲ್ಲಿನ ನೀತಿಗಳು ಮನಸ್ಸಿನಲ್ಲಿ ಉಳಿಯುತ್ತವೆ.

ಪ್ರೊ.ಜಿ. ಅಶ್ವತ್ಥ ನಾರಾಯಣ್ ಅವರು 2015 ರಲ್ಲಿ ಪ್ರಕಟವಾಗುತ್ತಿದ್ದ 'ಮಲ್ಲಾರ' ಎಂಬ ಪತ್ರಿಕೆಯಲ್ಲಿ ಮಕ್ಕಳಿಗಾಗಿ ನೀತಿಕತೆಗಳನ್ನು ಬರೆದಿದ್ದರ ಬಗ್ಗೆ ಒಂದೆರಡು ಬಾರಿ ಹೇಳಿದ್ದರು. ಅಂದು ನಾನು ಮಕ್ಕಳಿಗಾಗಿ ಬರೆದ ನನ್ನ 'ಮಹಿ' ಪುಸ್ತಕವನ್ನು ಅವರಿಗೆ ನೀಡಲು ಮನೆಗೆ ಹೋದ ಸಂದರ್ಭದಲ್ಲಿ ಮಲ್ಲಾರ ಪತ್ರಿಕೆಯಲ್ಲಿ ಪ್ರಕಟಗೊಂಡ ಪೇಪರ್ ಕಟ್ಟಿಂಗ್ ಅನ್ನು ತಂದು ಕೈಗಿಟ್ಟರು. ಒಂದೆರಡು ಕತೆಗಳನ್ನು ತಿರುವಿ ಹಾಕಿದೆ. ವಿಭಿನ್ನ ಕಥಾಶೈಲಿ, ನೀತಿ ಹೇಳುವಿಕೆ ಬಲು ಇಷ್ಟವಾದ ಕಾರಣ ಪುಸ್ತಕ ಮಾಡುಲು ಪ್ರೇರೇಪಣೆಯಾಯಿತು. ಅಂತೆಯೇ ವಸು ಪ್ರಕಾಶನದಿಂದ ಗಿಡಮರಬಳ್ಳಿಯ ನೀತಿಕತೆಗಳು ಎಂಬ ಶೀರ್ಷಿಕೆಯೊಂದಿಗೆ ಪುಸ್ತಕ ಪ್ರಕಟವಾಯಿತು.

ಪ್ರೌಢ ಸಾಹಿತ್ಯದಲ್ಲಿ ಹಳಗನ್ನಡ, ದಾಸ ಸಾಹಿತ್ಯ, ಇತರೆ ಗ್ರಂಥ ಸಂಪಾದನೆಯ ಮುಖ್ಯವಾದ ಕಾರ್ಯಗಳಲ್ಲಿ ತೊಡಗಿಕೊಂಡ ಅನಾಜಿ, ಮಕ್ಕಳ ಕಥನಸಾಹಿತ್ಯಕ್ಕೂ ಅನುರೂಪ ಕೊಡುಗೆ ನೀಡುವಲ್ಲಿ ಯಶಸ್ವಿಯಾಗಿದ್ದರು. ಸಾಂಸ್ಕೃತಿಕ ಪರಿಸರದ ಸಮೃದ್ಧತೆಯಲ್ಲಿ, ಮೌಲ್ಯಗಳ ರಸವತ್ತಾದ ಕತೆಯುಳ್ಳ ಈ ಹೊತ್ತಿಗೆ ವಿಶಿಷ್ಟ ಸರಣಿಯದ್ದು. ಕತೆಗಳು ಸರಳ ಭಾಷೆಯಲ್ಲಿ ಸಂವೇದನಾಶೀಲವಾಗಿದ್ದು ಗಿಡ ಮರ ಬಳ್ಳಿಯ ಮೂಲಕ ಕತೆಗಳನ್ನು ಪ್ರಸ್ತುತಪಡಿಸುವ ರೀತಿ ಇದೇ ಮೊದಲೇನೋ....! 'ಸಸ್ಯಗಳಿಗೂ ಜೀವವಿದೆ, ಸಂವಹನ ಶಕ್ತಿ ಇದೆ' ಎಂಬ ವಿಜ್ಞಾನ ನಮಗೆಲ್ಲಾ ತಿಳಿದೇ ಇದೆ. ಅವುಗಳೂ ಮಾತನಾಡುವುದಾಗಿದ್ದರೆ ಬಹುಶಃ ಮನುಷ್ಯ ಕಾಡು ಅಳಿಸುವ ಕೆಲಸ ಮಾಡುತ್ತಿರಲಿಲ್ಲ. ತಪ್ಪು ಹೆಜ್ಜೆ ಇಟ್ಟಾಗಲೆಲ್ಲ ಪರಿಸರವೇ ಮಾನವನ ಕಿವಿ ಹಿಂಡಿ ಬುದ್ಧಿ ಹೇಳುತ್ತಿತ್ತೇನೋ...! ಎಂದೆನಿಸಿತು. ಈಗಲೂ ಈ ಕೃತಿ ಕಿವಿಹಿಂಡುವ ಕೆಲಸ ಮಾಡಲಿದೆ.

ಒಟ್ಟಾರೆ ಈ ಕೃತಿ ಮಕ್ಕಳಷ್ಟೇ ಅಲ್ಲದೆ ದೊಡ್ಡವರಿಗೂ ಇಷ್ಟವಾಗುವುದರಲ್ಲಿ ಅನುಮಾನವಿಲ್ಲ. ಈ ಕೃತಿಯನ್ನು ಪ್ರಕಟಿಸಲು ಅನುಮತಿಸಿದ ಗುರುಗಳಾದ ಅನಾಜಿಯವರಿಗೆ ಮತ್ತವರ ಪತ್ನಿ ಎಂ.ಆರ್.ಲಕ್ಷ್ಮಿ ಅವರಿಗೂ, ಪುಸ್ತಕವನ್ನು ವಿನ್ಯಾಸಗೊಳಿಸಿದ ಶಂಕರ ಬೆನ್ನೂರ ಅವರಿಗೂ ಧನ್ಯವಾದಗಳು.

ಪರಿವಿಡಿ

1 ಕುಟಿಲ ಬುದ್ಧಿಯ ಕುಂಬಳಬಳ್ಳಿ



ಪುಷ್ಪಪುರದಲ್ಲಿ ನಂದನವನವೆಂಬ ತೋಟವು ತುಂಬ ಪ್ರಸಿದ್ಧವಾಗಿತ್ತು. ಅಲ್ಲಿ ಮಲ್ಲಿಗೆ, ದ್ರಾಕ್ಷಿ, ಕುಂಬಳ ಮೊದಲಾದ ಬಳ್ಳಿ ಗಿಡಗಳು ಬಹಳ ಬೆಳೆದಿದ್ದವು. ಜನರು ಆ ತೋಟವನ್ನು 'ಬಳ್ಳಿತೋಟ' ಎಂದು ಕರೆಯುತ್ತಿದ್ದರು. ತರಹೇವಾರಿ ಬಳ್ಳಿಗಳು ಚಪ್ಪರದ ಹಾಗೆ, ಸಾಲು ಸಾಲು ಹಾವುಗಳು ಅಂಕು ಡೊಂಕಾಗಿ ಬಿದ್ದುಕೊಂಡಂತೆ ಕಾಣುತ್ತಿದ್ದವು. ಆ ಬಳ್ಳಿಗಳ ಪೈಕಿ ಒಂದು ಕುಂಬಳ ಬಳ್ಳಿಗೆ ಕೆಟ್ಟ ಯೋಚನೆಯೊಂದು ಬಂತು. "ತೋಟದಲ್ಲಿ ಎಷ್ಟೇ ಹಬ್ಬಿ ಹರಡಿಕೊಂಡಿದ್ದರೂ ಯಾರು ನೋಡುತ್ತಾರೆ? ಬಳ್ಳಿತೋಟ ಎಂದಮೇಲೆ ತರಹೇವಾರಿ ಬಳ್ಳಿಗಳು ಇದ್ದೇ ಇರುತ್ತವೆ ಎಂದು ಯಾರೂ ಗಮನಿಸುವುದಿಲ್ಲ. ರಸ್ತೆಯಲ್ಲಿ ಹಬ್ಬಿದರೆ ಓಡಾಡುವ ಜನರಿಗೆಲ್ಲ ಕಾಣಿಸುತ್ತೇನೆ, ಜನಪ್ರಿಯಳಾಗುತ್ತೇನೆ" ಎಂದು ಯೋಚಿಸಿತು.

ರಸ್ತೆಗೆ ಹಬ್ಬತೊಡಗಿತು. ರಸ್ತೆಗೆ ಅಡ್ಡಲಾಗಿ ಕುಂಬಳ ಬಳ್ಳಿ ಬೆಳೆದು ಹರಡಿದ್ದರಿಂದ ಓಡಾಡುವ ಜನರಿಗೆ ಕಾಲ್ತೊಡಕ್ಕಾಗಿ ಜನ ಎಡವಿ

ಬೀಳತೊಡಗಿದರು. ಹತ್ತಾರು ಬಳ್ಳಿಗಳು ಹಬ್ಬಿ ಜನಕ್ಕೆ ನಡೆಯುವುದೇ ಕಷ್ಟವಾಯಿತು. ಕುಂಬಳ ಬಳ್ಳಿ, ಜನ ಎಡವಿ ಬಿದ್ದಾಗಲೆಲ್ಲಾ, ನನ್ನನ್ನು ಗಮನಿಸಿದ್ದಾರೆ, ಮೆಚ್ಚಿದ್ದಾರೆ ಅದಕ್ಕೆ ನನ್ನನ್ನು ತುಳಿದುಕೊಂಡು ಓಡಾಡುತ್ತಿದ್ದಾರೆ, ನನಗೆ ಶಾಭಾಷ್! ಎನ್ನುತ್ತಿದ್ದಾರೆ ಎಂದು ಭಾವಿಸತೊಡಗಿತು.



ಜನರು ರಸ್ತೆಯಲ್ಲಿ ಪದೇ ಪದೇ ಬಳ್ಳಿಗೆ ಕಾಲ್ತೊಡರಿ ಬಿದ್ದು ಬಿದ್ದು ಸಾಕಾಗಿ ಮೇಲಿನ ಅಧಿಕಾರಿಗಳಿಗೆ ದೂರು ಕೊಟ್ಟರು. ಅವರು ಬಂದು ಗಿಡ ಕತ್ತರಿಸುವ ಕತ್ತರಿ ತಂದು ಬುಡಮಟ್ಟ ಬಳ್ಳಿಗಳನ್ನೆಲ್ಲಾ ಕತ್ತರಿಸಿ ಕಿತ್ತೆಸೆದರು. ರಸ್ತೆಗೆ ಹಬ್ಬಿಕೊಂಡಿದ್ದ ಬಳ್ಳಿಗಳನ್ನಷ್ಟೇ ಅಲ್ಲದೆ ತೋಟಕ್ಕೆ ಹೋಗಿ ರಸ್ತೆ ಕಡೆಗೆ ಇದ್ದ ಬಳ್ಳಿಗಳನ್ನೆಲ್ಲಾ ಕಿತ್ತೆಸೆದರು. ಅದರಲ್ಲಿ ಕುಂಬಳ ಬಳ್ಳಿ ಪೂರ್ಣವಾಗಿ ನಾಶವಾಯಿತು.

ಕುಂಬಳ ಬಳ್ಳಿ ರಸ್ತೆಗೆ ಹಬ್ಬತೊಡಗಿದಾಗ ಬಳ್ಳಿಗೆ ಆಸರೆಯಾಗಿ ನಿಂತಿದ್ದ ಆಧಾರ ಕಂಬ ಹೇಳಿದ ಮಾತನ್ನು ಕುಂಬಳ ಬಳ್ಳಿ ಕೇಳಲಿಲ್ಲ. ಆಧಾರ ಕಂಬ ಹೀಗೊಂದು ಮಾತು ಹೇಳಿತ್ತು, "ಕೀರ್ತಿಯ ಚಪಲ ಒಳ್ಳೆಯದಲ್ಲ. ಇನ್ನು ಜನರಿಗೆ ಅಡ್ಡವಾಗಿ ತೊಂದರೆ ಕೊಡುವುದು ಮಹಾಪಾಪ. ಪ್ರದರ್ಶನ ವ್ಯಾಮೋಹವಂತೂ ಒಳ್ಳೆಯದಲ್ಲ." ಆದರೆ ಅದರ ಮಾತನ್ನು ಕೇಳದೆ ಕುಂಬಳ ಬಳ್ಳಿ ತಾನೂ ಹಾಳಾಯಿತು; ಉಳಿದ ಬಳ್ಳಿಗಳನ್ನೂ ಹಾಳು ಮಾಡಿತು.

2 ದ್ರಾಕ್ಷಿ ಮತ್ತು ಸೇಬು ಹಣ್ಣಿನ ಪಾಠ



ಒಬ್ಬರು ಗುರುಗಳು ತಮ್ಮ ಶಿಷ್ಯರೊಂದಿಗೆ ಬಂದು ರಾಮಪುರದ ತೋಟವೊಂದರಲ್ಲಿ ತಂಗಿದ್ದರು. ಗುರುಗಳಿಗೆ ಗಿಡಮರಗಳ ಭಾಷೆ ಮತ್ತು ಪಶುಪಕ್ಷಿಗಳ ಭಾಷೆ ತಿಳಿಯುತ್ತಿತ್ತು.

ಗುರು–ಶಿಷ್ಯರು ಕುಳಿತಿದ್ದ ಬಳಿಯಲ್ಲಿ ಚಪ್ಪರಕ್ಕೆ ದ್ರಾಕ್ಷಿ ಬಳ್ಳಿ ಹಬ್ಬಿಸಿದ್ದರು. ಅದರಲ್ಲಿ ಗೊಂಚಲು ಗೊಂಚಲಾಗಿ ದ್ರಾಕ್ಷಿಹಣ್ಣುಗಳು ಬಿಟ್ಟಿದ್ದವು. ಒಂದು ಪುಟ್ಟಹಕ್ಕಿ ಅವುಗಳನ್ನು ತಿನ್ನಲು ಬಂದಿತು. ಗೊಂಚಲು ದ್ರಾಕ್ಷಿಯನ್ನು ನೋಡಿ, "ಅಯ್ಯೋ, ಒಂದೊಂದೇ ಹಣ್ಣನ್ನು ತಿನ್ನಬೇಕು. ಇಡೀ ಗೊಂಚಲೇ ಒಂದು ಹಣ್ಣಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದು ಮನಸ್ಸಿಗೆ ಅನ್ನಿಸಿತು. ಕೂಡಲೇ ದ್ರಾಕ್ಷಿ ಬಳ್ಳಿಯನ್ನು "ದ್ರಾಕ್ಷಿಹಣ್ಣೇ ದ್ರಾಕ್ಷಿಹಣ್ಣೇ, ನೀನು ಗೊಂಚಲು ಗೊಂಚಲಾಗಿ ಹುಟ್ಟಿ ಪುಟ್ಟ ಹಣ್ಣಿನ ರಾಶಿಯನ್ನೇ ಬಿಡುತ್ತೀಯೆ ಏಕೆ?" ಎಂದು ಕೇಳಿತು.

ಅದಕ್ಕೆ ಉತ್ತರವಾಗಿ ದ್ರಾಕ್ಷಿ ಬಳ್ಳಿ ಹೇಳಿತು, "ಗೊಂಚಲು ಗೊಂಚಲಾಗಿ ಬಿಡುವುದು ಏಕೆ ಗೊತ್ತೇ ಹಣ್ಣುಗಳನ್ನು ಎಲ್ಲರೂ ಹಂಚಿ ತಿನ್ನಲಿ ಎಂಬುದು ಉದ್ದೇಶ. ಅದಕ್ಕೆ ನಾನು ಗೊಂಚಲು ಗೊಂಚಲಾಗಿರುವೆ" ಎಂದಿತು.

ಆ ಸಮಯಕ್ಕೆ ಸರಿಯಾಗಿ ಪಕ್ಕದಲ್ಲಿದ್ದ ಸೇಬಿನ ಮರದಿಂದ ಹಣ್ಣೊಂದು ಕೆಳಕ್ಕೆ ಬಿದ್ದಿತು. ಅದು ಇಡಿಯಾಗಿ ದಪ್ಪನಾಗಿ ಒಂದೇ



ಹಣ್ಣಾಗಿತ್ತು. ಸೇಬಿಗೆ ದ್ರಾಕ್ಷಿ ಹಣ್ಣಿನ ಹಾಗೆ ಗೊಂಚಲು ಗೊಂಚಲಾಗಿರುವುದಿಲ್ಲ ಎಂದು ಪ್ರಶ್ನೆ ಬಂದಿತು. ಕೂಡಲೇ ಆ ಹಕ್ಕಿ ಸೇಬಿನ ಮರವನ್ನು ಕೇಳಿಯೇ ಬಿಟ್ಟಿತು, "ಸೇಬಿನ ಮರವೇ, ನೀನೇಕೆ ದ್ರಾಕ್ಷಿಹಣ್ಣಿನ ಹಾಗೆ ಪುಟ್ಟ ಪುಟ್ಟದಾಗಿ ಗೊಂಚಲು ಗೊಂಚಲಾಗಿ ಏಕೆ ಬಿಡುವುದಿಲ್ಲ?"

ಅದಕ್ಕೆ ಹಕ್ಕಿಗೆ ಸೇಬಿನ ಮರ ಹೇಳಿತು, "ತಿನ್ನುವ ಆಹಾರ ಮನಸ್ಸಿಗೆ ಸಂತೋಷ ಕೊಡಬೇಕು. ದೇಹಧರ್ಮಕ್ಕೆ, ಕಾಲಧರ್ಮಕ್ಕೆ ಅನುಗುಣವಾಗಿರಬೇಕು. ಸ್ವಲ್ಪ ಸ್ವಲ್ಪವಾಗಿ ತಿನ್ನಬೇಕು". ಈ ನಿಯಮಗಳಿಗೆ ತಕ್ಕಂತೆ ದ್ರಾಕ್ಷಿ ಪುಟ್ಟ ಪುಟ್ಟ ಹಣ್ಣುಗಳಾಗಿ ಸಿಹಿಯಾಗಿ, ಗೊಂಚಲಾಗಿ ಬಿಡುತ್ತದೆ. ಆದರೆ ನಾನು ಒಂದೇ ಹಣ್ಣಾಗಿ ಬಿಡುವುದು ಏಕೆ ಗೊತ್ತೇ? ಹಣ್ಣುಗಳನ್ನು ನಾವು ತಿನ್ನುವುದಷ್ಟೇ ಅಲ್ಲ, ದಾನವನ್ನೂ ಮಾಡಬೇಕು. 'ಹೂವು ಕೊಟ್ಟಷ್ಟು ಮುಡಿ; ಹಣ್ಣು ಕೊಟ್ಟಷ್ಟು ತಿನ್ನು' ಎಂಬ ಗಾದೆ ಇದೆ. ದಾನ ಮಾಡಬೇಕಾದರೆ ಜಾಸ್ತಿ ದಾನ ಮಾಡಬೇಕು. ಶ್ರೇಷ್ಠವಾದುದನ್ನು ಮಾಡಬೇಕು. ಪೂರ್ತಿ ದಾನ ಮಾಡಬೇಕು. ಅದಕ್ಕೆ ನಾನು ದಪ್ಪನಾಗಿ ರುಚಿಯಾಗಿ ಒಂದೇ ಹಣ್ಣಾಗಿ ಬೆಳೆಯುತ್ತೇನೆ" ಎಂದಿತು.ಇದನ್ನು ಕೇಳಿ ಹಕ್ಕಿಗೆ ಸಂತೋಷವಾಯಿತು.

ಗುರುಗಳು ಆ ಹಕ್ಕಿ – ಹಣ್ಣುಗಳ ಮಾತು ಕಥೆ ಕೇಳಿ ಶಿಷ್ಯರಿಗೆ ತಿಳಿಸಿದರು. "ಈವತ್ತು ದ್ರಾಕ್ಷಿ – ಸೇಬು ಹಣ್ಣಿನ ಮಾತುಗಳೇ ಪಾಠ" ಎಂದರು.

3 ಹೂವಿನ ಗರ್ವ ಮತ್ತು ಬೇಲಿಯ ಪಾಠ



ಕೃಷ್ಣಗಿರಿ ಬಗೆಬಗೆಯ ಹೂಗಳನ್ನು ಬೆಳೆಯುವುದರಲ್ಲಿ ಖ್ಯಾತಿ ಹೊಂದಿತ್ತು. ಗುಲಾಬಿ, ಮಲ್ಲಿಗೆ, ಸೇವಂತಿಗೆ, ಇರುವಂತಿಕೆ, ಸುಗಂಧರಾಜ ಮೊದಲಾದ ನಾನಾ ಬಗೆಯ ಹೂಗಳು ಬೇರೆ ಊರುಗಳಲ್ಲಿ ಬೆಳೆಯುತ್ತಿದ್ದರೂ ಕೃಷ್ಣಗಿರಿಯ ಹೂಗಳು ಆಕಾರ, ಬಣ್ಣ ಮತ್ತು ಗಾತ್ರಗಳಲ್ಲಿ ತುಂಬ ಸೊಗಸಾಗಿ ಇರುತ್ತಿದ್ದವು. ಆದ್ದರಿಂದ ಜನರು ಕೃಷ್ಣಗಿರಿಯಲ್ಲಿ ಬೆಳೆದ ಹೂವುಗಳನ್ನೇ ಹೆಚ್ಚಾಗಿ ಇಷ್ಟಪಟ್ಟು ಕೊಳ್ಳುತ್ತಿದ್ದರು.

ಕೃಷ್ಣಗಿರಿಯಲ್ಲಿ ರಾಮಪ್ಪಯ್ಯನ ತೋಟದ ಹೂವುಗಳು ತುಂಬ ಜನಪ್ರಿಯುವಾಗಿದ್ದವು. ಒಮ್ಮೆ ರಾಮಪ್ಪಯ್ಯನ ತೋಟದಲ್ಲಿ ಅಪರೂಪದ ಹೂಗಿಡದ ಬೀಜ ಬಿತ್ತಿದ್ದರು. ಆ ಗಿಡ ಬೆಳೆದು ಹೂ ಬಿಟ್ಟಾಗ ಯಾರೋ ಬೈಯುತ್ತಿರುವ ಶಬ್ದ ಕೇಳಿಸಿತು. ಆ ಅಪರೂಪದ ಹೂವು ತನ್ನ ರಕ್ಷಣೆಗಾಗಿ ಹಾಕಿದ್ದ ಬೇಲಿಯನ್ನು ಹೀಗೆ ನಿಂದಿಸುತ್ತಿತ್ತು:

"ನಾನು ಸುಂದರ ಹೂ, ಬಣ್ಣದಲ್ಲಿ ಆಕರ್ಷಕ, ಆಕಾರದಲ್ಲಿ ಸೊಗಸು ಮತ್ತು ವಾಸನೆಯಲ್ಲಿ ಘಮಘಮ. ಬಣ್ಣವಿಲ್ಲದ ನೀನು ನನ್ನ ಪಕ್ಕದಲ್ಲಿರುವುದು ನನಗೆ ಅಪಮಾನ. ಕೊಳಕು ಬಣ್ಣ, ಮುಳ್ಳಿನ ಕೊಂಬೆಗಳು, ಒಣಗಿದ ಎಲೆಗಳು – ನಿನ್ನನ್ನು ಎಷ್ಟು ಅಸಹ್ಯವಾಗಿ ಜೋಡಿಸಿದ್ದಾರೆ! ಥೂ, ನಿನ್ನನ್ನು ನೋಡಿದರೆ ಅಸಹ್ಯವಾಗುತ್ತದೆ..." ಎಂದೆಲ್ಲ ಬೈಯುತ್ತಿತ್ತು.



ಆಗ ಅಲ್ಲೇ ಇದ್ದ ಓತಿಕೆವೊಂದು ಬೇಲಿಯ ಮೇಲೆ ಕುಳಿತು ಈ ಮಾತುಗಳನ್ನೆಲ್ಲ ಕೇಳಿಸಿಕೊಳ್ಳುತ್ತಿತ್ತು. ಅದು ಹೂವಿಗೆ ಹೇಳಿತು, "ಜಂಭದ ಕೋಳಿಮರಿ ಹೂವಿನ ಗಿಡವೇ, ಮೊದಲು ಬೈಯುವುದನ್ನು ನಿಲ್ಲಿಸು. ಸ್ವಲ್ಪ ವಿವೇಕದಿಂದ ಯೋಚನೆ ಮಾಡು. ಯಾರೇ ಆಗಲಿ ತಮ್ಮ ಸೌಂದರ್ಯದ ಬಗ್ಗೆ ಅಭಿಮಾನ ಹೊಂದಿರಬೇಕೇ ಹೊರತು ಅಹಂಕಾರ ಪಡಬಾರದು; ಇತರರನ್ನು ದೂಷಿಸಬಾರದು. ಚೆಲುವು ಮತ್ತು ಸೊಗಸು ಎಂಬುದು ದೇವರ ಕೃಪೆ, ಅದು ನಮ್ಮ ಸ್ವತ್ತಲ್ಲ.

ದೇವರು ನಿನಗೆ ಸೌಂದರ್ಯವನ್ನು ಕೊಟ್ಟ ಮಾತ್ರಕ್ಕೆ ಇತರರನ್ನು ಕೀಳಾಗಿ ಕಾಣಬೇಡ. ಈ ಬೇಲಿ ನಿನ್ನಂತೆ ಸೊಗಸಾಗಿ ಕಾಣದಿರಬಹುದು, ಆದರೆ ಅದು ಮಾಡುವ ಸೇವೆಯಲ್ಲಿ ಮತ್ತು ಗುಣದಲ್ಲಿ ನಿನಗಿಂತ ಶ್ರೇಷ್ಠವಾಗಿದೆ. ಈ ಮುಳ್ಳಿನ ಬೇಲಿ ಇಲ್ಲದಿದ್ದರೆ ಮೇಕೆ, ದನಗಳು ನಿನ್ನನ್ನು ಮೇಯುತ್ತಿದ್ದವು. ಇಂದು ನೀನು ಸುರಕ್ಷಿತವಾಗಿ ಬೆಳೆದು ನಿಂತಿರುವುದು ಈ ಬೇಲಿಯಿಂದಲೇ. ಯಾರಿಗೆ ಆಗಲಿ ಬಾಹ್ಯ ಸೌಂದರ್ಯಕ್ಕಿಂತ ಸೇವೆ ಮತ್ತು ತ್ಯಾಗದ ಗುಣವೇ ಮುಖ್ಯ" ಎಂದಿತು. ಓತಿಕೇತನ ಮಾತನ್ನು ಕೇಳಿದ ಹೂಗಿಡಕ್ಕೆ ತನ್ನ ತಪ್ಪಿನ ಅರಿವಾಗಿ ತಲೆ ತಗ್ಗಿಸಿತು

4 ತುಂಬೇ ಹೂವಿನ ಕತೆ



ಅಂದಿನ ಶಿವರಾತ್ರಿ. ಹೂವಿನ ತೋಟದಲ್ಲಿ ಗುಲಾಬಿ, ಮಲ್ಲಿಗೆ, ಸಂಪಿಗೆ, ಸೇವಂತಿಗೆ, ಕೆಂಪು ಹೂ, ಸುಗಂಧರಾಜ, ಪಾರಿಜಾತ, ಕೋಗಿಲೆ, ದಾಸವಾಳ ಮೊದಲಾದ ಹೂಗಳೆಲ್ಲ ಅರಳಿದ್ದವು. ಅಲ್ಲಿ ತುಂಬೇ ಗಿಡಗಳಲ್ಲಿ ತುಂಬೇ ಹೂಗಳು ಬಿಟ್ಟಿದ್ದವು. ಮನುಷ್ಯರಿಗೆ ಅವರದೇ ಭಾಷೆ ಇದ್ದ ಹಾಗೆ ನಾವು ನೀವು ಮಾತನಾಡುವ ಹಾಗೆ ಗಿಡಮರಗಳಿಗೂ ಅವರದೇ ಭಾಷೆ ಇರುತ್ತದೆ. ಅವರ ಭಾಷೆಯಲ್ಲಿ ಎಲ್ಲ ಹೂಗಳು ಹೀಗೆ ಮಾತನಾಡಿಕೊಂಡು ಚರ್ಚೆ ಮಾಡುತ್ತಿದ್ದವು. ತುಂಬೆಹೂವನ್ನು ಎಲ್ಲರೂ ಹಂಗಿಸುತ್ತಿದ್ದರು, ದೂಷಿಸುತ್ತಿದ್ದರು.

ಗುಲಾಬಿ ಹೂ, "ನನ್ನ ಬಣ್ಣ, ಆಕಾರ, ಸುಗಂಧ ಈ ತುಂಬೆಗೆ ಎಲ್ಲಿ ಬರಬೇಕು? ಆದರೂ ನನ್ನ ಗಿಡದ ಬಳಿ ಬೆಳೆದು ನನಗೆ ಬೇಜಾರು ಮಾಡುತ್ತದೆ". ಪಾರಿಜಾತ, "ನನ್ನ ಸೊಗಸು, ಪರಿಮಳ ನಿಮಗೆಲ್ಲ ಗೊತ್ತೇ ಇದೆ. ನಾನು ಅರಳಿ ಉದುರಿದಾಗ ಕೆಳಗೆ ಬುಡದಲ್ಲಿ ತುಂಬೆಗಿಡದ ಮೇಲೆ ಬಿದ್ದು ಎಲ್ಲ ಹಾಳಾಗುತ್ತೆ" ಎಂದು ಗೊಣಗಿತು. ಮಲ್ಲಿಗೆ, "ನಾನೆಷ್ಟು ಪರಿಮಳ, ಅಂದದ ಹೂ, ನನ್ನ

ಹೂಗಳೆಲ್ಲ ತುಂಬೆಗಿಡದ ಸಂದಿಗಳಲ್ಲಿ ಸಿಕ್ಕಿಕೊಂಡು ಜನಕ್ಕೆ ಸಿಕ್ಕುವುದೇ ಇಲ್ಲ". ಹೀಗೆ ಒಂದೊಂದು ಗಿಡವೂ ತನ್ನ ಗುಣ ಹೇಳಿಕೊಂಡು, "ಈ ತುಂಬೆ ಎಂಬ ಗುಜ್ಜಾರಿ ಹೂವಿಗೆ ಸುವಾಸನೆ ಇಲ್ಲ, ಗಿಡಕ್ಕೆ ಅಂದವೇ ಇಲ್ಲ" ಇತ್ಯಾದಿ ಪದಗಳಿಂದ ತುಂಬೆಹೂವನ್ನು ದೂಷಿಸುತ್ತಿದ್ದವು.

ಇವತ್ತು ಶಿವರಾತ್ರಿ ಭಕ್ತರೆಲ್ಲರೂ ಬಂದು ನಮ್ಮನ್ನೆಲ್ಲ ಬುಟ್ಟಿಯಲ್ಲಿ ತುಂಬಿಕೊಂಡು ಶಿವನಿಗೆ ಅರ್ಪಿಸುತ್ತಾರೆ. ನಾವೆಲ್ಲ ಪುಣ್ಯವಂತರು. ಈ ತುಂಬೆಹೂವನ್ನು ಯಾರು ಕೇಳ್ತಾರೆ" ಎಂದು ಮಾತನಾಡಿಕೊಂಡವು.



ಶಿವನಿಗೆ ತುಂಬೆ ಹೂ ತುಂಬ ಇಷ್ಟ ಅಂತ ಭಕ್ತರಿಗೆಲ್ಲ ಗೊತ್ತಿದ್ದ ವಿಷಯ. ಶಿವರಾತ್ರಿ ದಿನ ತುಂಬೆಹೂವಿನ ಪೂಜೆ ಶ್ರೇಷ್ಠ ಅಂತ ಹೇಳಿ ಎಲ್ಲರೂ ತುಂಬೆಹೂವನ್ನು ಹುಡುಕಿಕೊಂಡು ತೋಟಕ್ಕೆ ಬಂದು ಹೂವನ್ನು ಕಿತ್ತುಕೊಂಡರು. ಉಳಿದ ಹೂಗಳ ಕಡೆ ಭಕ್ತರು ನೋಡಲಿಲ್ಲ. ಎಲ್ಲ ಹೂಗಳಿಗೂ ಗರ್ವಭಂಗ ಆಯಿತು.

ದೇವರಿಗೆ ನಾವು ಬೇಕಾದವರು ಆಗಬೇಕು. ಅದಿಲ್ಲದಿದ್ದರೆ ನಮ್ಮ ಜೀವನ ವ್ಯರ್ಥ ಎಂಬ ಪಾಠ ಕಲಿತ ಇತರ ಹೂವುಗಳು ಅವತ್ತಿನಿಂದ ತುಂಬೆಹೂವನ್ನು ದೂಷಿಸುವುದನ್ನು ಬಿಟ್ಟವು.

5 ಜಾಣರ ಮಾತನ್ನು ಕೇಳದ ಸೇಬಿನ ಮರ




ಆನಂದಪುರದ ಸೇಬು ಎಂದರೆ ಕಾಶ್ಮೀರದ ಸೇಬಿಗಿಂತ ರುಚಿ. ಏಕೆಂದರೆ ಅಲ್ಲಿಯ ಮಣ್ಣಿನ ಗುಣ ಅಂಥದು. ಆನಂದಪುರದಲ್ಲಿ ಎಲ್ಲರೂ ಸೇಬಿನ ಮರಗಳನ್ನು ಬೆಳೆಸಿದ್ದರು. ಸಂಪಣ್ಣನ ತೋಟದಲ್ಲಿ ಒಂದು ಹಳೆಯ ಸೇಬಿನ ಮರ ಇತ್ತು. ನಾನೇ ಎಲ್ಲ ಮರಗಳಿಗಿಂತ ಹಿರಿಯ ಎಂದು ಜಂಬ ಕೊಚ್ಚಿಕೊಳ್ಳುತ್ತಿತ್ತು. ಆ ಮರದಲ್ಲಿ ಒಂದು ಪೊಟರೆ ಇತ್ತು. ಅದರಲ್ಲಿ ಒಂದು ಜೇನು ಹಿಂಡು ಗೂಡು ಕಟ್ಟಿತ್ತು. ಪಕ್ಕದ ಕಾಡಿನ ಜೇನುಗೂಡಿನ ಹಿಂಡುಗಳೆಲ್ಲ ಹಾರಿಬಂದಾಗ ನೀವೂ ಈ ಮರದಲ್ಲೇ ವಾಸಮಾಡಿ ಎಂದಿತು ಸೇಬಿನ ಮರ. ಮರದ ತುಂಬ ಜೇನುಗೂಡುಗಳಾಗಿ ಮರ ಬೆಳೆಯಲು ಸಾಕಷ್ಟು ಅವಕಾಶವಾಗದೆ ಮರದಲ್ಲಿದ್ದ ಹಣ್ಣುಗಳು ಹುಳಿಯಾಗತೊಡಗಿದವು.

ಆಗ ತೋಟದ ಉಳಿದ ಮರಗಳು ಸೇಬಿನಮರಕ್ಕೆ ಬುದ್ಧಿ ಹೇಳಿದವು, "ಮಿತಿಮೀರಿದ ಉದಾರತೆ ಒಳ್ಳೆಯದಲ್ಲ. ಎಲ್ಲ ಜೇನುಹಿಂಡುಗಳಿಗೆ ಬನ್ನಿ, ಬನ್ನಿ ನನ್ನ ಮರದಲ್ಲಿ ಗೂಡು ಕಟ್ಟಿ ಅಂತ

ಹೇಳಬೇಡ" ಎಂದವು. ಮರದಲ್ಲಿ ಗೂಡು ಕಟ್ಟಿದ್ದ ಹಕ್ಕಿಗಳೂ ಹೇಳಿದವು. ಆ ಹಳೆಯ ಸೇಬಿನಮರ ಕೇಳಲಿಲ್ಲ. "ನಾನು ಹಿರಿಯ ಮರ. ಎಲ್ಲರಿಗೂ ಆಶ್ರಯ ಕೊಡುತ್ತೇನೆ. ನೀವ್ಯಾರು ಕೇಳೋಕೆ?" ಎಂದಿತು. ಮರದ ಪೊಟರೆ, ಚಿಗುರುವ ಜಾಗ, ಕೊಂಬೆ, ರೆಂಬೆ ಎಲ್ಲ ಕಡೆ ಜೇನುಹಿಂಡು ಗೂಡು ಕಟ್ಟಿ ಮರದಲ್ಲಿ ಹಣ್ಣು ಬಿಡುವುದು ಕಡಿಮೆಯಾಯಿತು. ಬಿಟ್ಟ ಹಣ್ಣುಗಳೂ ಕಳಪೆಯಾದವು, ಹುಳಿಯಾದವು. ಮರ ಒಣಗಿತು. ಜನ ಬಂದವರು ಹುಳಿಹಣ್ಣು ಎಂದು ಸೇಬನ್ನು ತಿನ್ನದೆ ಎಸೆದರು. ಮರ ಒಣಗಿದ ಸೌದೆಯಾಯಿತು ಎಂದು ಜೇನನ್ನು ಓಡಿಸಿ ಒಳಗೆ ಸೌದೆಗಾಗಿ ಮರವನ್ನು ಕಡಿದುಕೊಂಡು ಹೋದರು. ಎಷ್ಟೇ ಹಿರಿಯರಾದರೂ ಕೆಲವೊಮ್ಮೆ ಜಾಣರ ಮಾತನ್ನು ಕೇಳಬೇಕು. ಇಲ್ಲದಿದ್ದರೆ ಹಳೆಯ ಸೇಬಿನ ಮರದಂತೆ ಹಾಳಾಗುತ್ತಾರೆ



6 ಜಗನ್ಮೋಹಿನಿ ಮರ



ಭಾಗಾಪುರ ನದಿಯ ದಡದಲ್ಲಿ ಅಪರೂಪದ ಜಗನ್ಮೋಹಿನಿ ಎಂಬ ಹೂವಿನ ಮರ ಬೆಳೆಯಿತು. ಬಂಗಾರದ ಹೂಗಳು ಆ ಮರದ ತುಂಬ ತುಳುಕಾಡುತ್ತಿದ್ದವು. ಬೆಳಗ್ಗೆ ಸೂರ್ಯೋದಯವಾದಾಗ, ಮಧ್ಯಾಹ್ನ ಸೂರ್ಯ ನೆತ್ತಿಗೆ ಬಂದಾಗ, ಸಂಜೆ ಸೂರ್ಯ ಮುಳುಗುವಾಗ ಸೂರ್ಯನ ಕಿರಣಗಳು ಆ ಮರದ ಮೇಲೆ ಬಿದ್ದು ಬಂಗಾರದ ಮರವಾಗಿ ಕಾಣಿಸುತ್ತಿತ್ತು. ಅಮರಾವತಿಯಲ್ಲಿ ಸಾವಿರ ಬಂಗಾರದ ದೀಪಗಳು ಬೆಳಗಿದಂತೆ ಕಾಣುತ್ತಿತ್ತು. ನದಿಗೆ ಬಂದವರೆಲ್ಲ ಅದರ ಚೆಲುವನ್ನು ನೋಡುತ್ತಾ ಆನಂದಿಸುತ್ತಾ ನದಿಯಲ್ಲಿ ಈಜದೆ ನದಿಯ ದಡದ ಅಲೆಗಳ ಚಲ್ಲಾಟ ಗಮನಿಸದೆ ಹಾಗೆಯೇ ತೆರಳುತ್ತಿದ್ದರು. ಇದರಿಂದ ನದಿಗೆ ದಡದಲ್ಲಿದ್ದ ಜಗನ್ಮೋಹಿನಿ ಮರದ ಬಗ್ಗೆ ಹೊಟ್ಟೆಕಿಚ್ಚು ಉಂಟಾಯಿತು. ಪ್ರತೀಕಾರಕ್ಕೆ ಯೋಚಿಸಿತು.

"ಎಲಾ ಮರವೇ, ನನ್ನ ನೀರಿನಿಂದ ಬೆಳೆದು ನನ್ನನ್ನೇ ಮೀರಿಸಿದ ಆಕರ್ಷಣೆ ಪಡೆದು ನನ್ನ ಬಳಿ ಬಂದ ಜನರನ್ನೆಲ್ಲ ನಿನ್ನ ಕಡೆ ಸೆಳೆಯುತ್ತಿರುವೆ ಅಲ್ಲವೇ? ತಾಳು, ನಿನಗೆ ತಕ್ಕಶಾಸ್ತಿ ಮಾಡುತ್ತೇನೆ" ಎಂದುಕೊಂಡು ದಿನವೂ ಅಲೆಗಳಿಂದ ಆ ಮರದ ಬುಡಕ್ಕೆ ಬಡಿಯುತ್ತಾ ಇತ್ತು. ಒಮ್ಮೆ ಪ್ರವಾಹ ಬಂದಾಗ ರಭಸದಿಂದ ದಡವನ್ನೇ ಕೊಚ್ಚಿ ಹಾಕಿತು. ಬಲವಾಗಿ ಬೇರೂರಿ ಬೃಹತ್ತಾಗಿ ಬೆಳೆದಿದ್ದ



ಜಗನ್ಮೋಹಿನಿ ಮರ ಉಳಿದ ಮರಗಳೊಂದಿಗೆ ನದಿಯಲ್ಲಿ ಪ್ರವಾಹದಿಂದಾಗಿ ತೇಲಿಹೋಯಿತು. ಆಮೇಲೆ ಉಳಿದಿದ್ದು ಮಣ್ಣು, ಕಸ, ಬೋಳು ನೆಲ. ಅಷ್ಟೆ ಆಕರ್ಷಕ ಮರಗಳು, ತಂಗಾಳಿ, ಬಣ್ಣದ ಹೂಗಳು, ರುಚಿಕರವಾದ ಹಣ್ಣುಗಳು, ಇಂಪಾದ ಹಕ್ಕಿಗಳು ಏನೂ ಇಲ್ಲದ ಕೊಟ್ಟಿ ನೆಲದ ಆ ನದಿಯ ಬಳಿಗೆ ಯಾರೂ ಬರುತ್ತಿರಲಿಲ್ಲ. ನಿರ್ಜನ ಪ್ರದೇಶದಲ್ಲಿ ನದಿ ದಿಕ್ಕಿಲ್ಲದ ಮಗುವಿನಂತೆ ಅನಾಥವಾಗಿ ಹರಿಯತೊಡಗಿತು. ಪಾಂಡವರನ್ನು ನಾಶಮಾಡಲು ಹೋಗಿ ಕೌರವರು ಹಾಳಾದಂತೆ ಆಯಿತು. ತಾನು ಕೆಡುವುದಲ್ಲದೆ ಕೋತಿ ವನವನ್ನೆಲ್ಲಾ ಹಾಳುಮಾಡಿದಂತಾಯಿತು. ಹೊಟ್ಟೆಕಿಚ್ಚಿನ ಫಲವಾಗಿ ಬಂಗಾರದ ಬಣ್ಣದ ಹೂಗಳ ಜಗನ್ಮೋಹಿನಿ ಮರವನ್ನು ಹಾಳುಮಾಡಲು ಯತ್ನಿಸಿದ ಫಲವಾಗಿ ಇಡೀ ತೋಟವೇ ಹಾಳಾಯಿತು. "ಸಾವಿರ ಚಿತ್ತಾರವನ್ನು ಮಸಿ ನುಂಗಿತು" ಎಂಬಂತೆ ನದಿಯ ಹೊಟ್ಟೆಕಿಚ್ಚಿನಿಂದ ಸುಂದರ ಪ್ರಕೃತಿ ಹಾಳಾಯಿತು.

7 ಹಕ್ಕಿಯ ಅನುಭವದ ಮಾತು



ಕಾಡೂರು ತುಂಬ ಹಳೆಯ ಊರು. ಕಾಡಿನ ಪಕ್ಕ ಇದ್ದ ಊರು ಕಾಡೂರು ಆಗಿತ್ತು. ಆ ಊರಲ್ಲಿ ಇದ್ದ ಬಡವನೊಬ್ಬ ಕಾಡಿನಿಂದ ಒಣಗಿದ ಮರಗಳ ಸೌದೆ ಮತ್ತು ಪುಳ್ಳೆಗಳನ್ನು ತಂದು ಮಾರಿ ಜೀವಿಸುತ್ತಿದ್ದ. ಅವನ ಬಳಿ ಇದ್ದ ಕೊಡಲಿಯ ಕಾವು ಸವೆದು ಮುರಿದುಹೋಯಿತು. ಕೈಯಲ್ಲಿ ಕೊಡಲಿಯಿಂದ ಕಡಿಯಲು ಶ್ರಮವಾಗುತ್ತಿತ್ತು. ಆ ಕೊಡಲಿಗೆ ತಕ್ಕ ಕಾವು ಕೋಲನ್ನು ಹುಡುಕತೊಡಗಿದನು. ಕಾಡಿನಲ್ಲಿದ್ದ ಪ್ರತಿ ಮರದ ಬಳಿಗೂ ಹೋಗಿ, "ಮರವೇ, ಮರವೇ, ನನಗೊಂದು ಕಾವನ್ನು ಕೊಡು ಅದನ್ನು ಕೊಡಲಿಗೆ ಹಾಕಿ ಒಣಗಿದ ಮರಗಳನ್ನು ಕಡಿದು ಮಾರಿ ನನ್ನ ಹೊಟ್ಟೆ ತುಂಬಿಸಿಕೊಳ್ಳುತ್ತೇನೆ" ಎನ್ನುತ್ತಿದ್ದ. ಯಾರೂ ಅವನ ಮಾತಿಗೆ ಕಿವಿಗೊಡಲಿಲ್ಲ. ಜೊತೆಗೆ ಯಾವ ಮರದಲ್ಲೂ ತಕ್ಕ ಗಾತ್ರದ ಕಾವು ಇರಲಿಲ್ಲ. ಆದರೆ ಒಂದು ಮರದಲ್ಲಿ ಮಾತ್ರ ಅವನ ಕೊಡಲಿಗೆ ಸರಿಯಾದ ಕಾವುಕೋಲು ಕಾಣಿಸಿತು. ಬಡವ ಆ ಮರದ ಬಳಿಗೆ ಹೋದನು.

"ಮರವೇ, ನಿನ್ನ ಕೊಂಬೆಯೊಂದನ್ನು ಕೊಡು ನನ್ನ ಕೊಡಲಿಗೆ ಕಾವು ಮಾಡಿಕೊಂಡು ಜೀವನ ಮಾಡಿಕೊಳ್ಳುತ್ತೇನೆ" ಎಂದು ಗೋಳಾಡಿದ. ಪಾಪ ಬಡವ ಬದುಕಿಕೊಳ್ಳಲಿ ಕೊಡೋಣ ಅಂದುಕೊಂಡಿತು ಆ ಮರ. ಆಗ ಆ ಮರದ ಮೇಲೆ ಗೂಡುಕಟ್ಟಿಕೊಂಡು ವಾಸಮಾಡುತ್ತಿದ್ದ ಹಕ್ಕಿಗೆ ಈ ವಿಷಯ ತಿಳಿಯಿತು. ಊರಿನಲ್ಲಿ ಹಾರಾಡುತ್ತಿದ್ದ ಆ ಹಕ್ಕಿಗೆ ಬಡವನ ಸ್ವಭಾವ



ತಿಳಿದಿತ್ತು. "ಓ ಮರವೇ, ಆ ಬಡವನಿಗೆ ಕಾವು ಕೋಲು ಕೊಡಬೇಡ. ಅವನು ದುರಾಸೆಯ ಮನುಷ್ಯ. ಅಪಾತ್ರನಿಗೆ ದಾನ ಮಾಡಬಾರದು. ಅದರಿಂದ ನಮಗೆ ಅಪಾಯ" ಎಂದಿತು.

ಈ ಮಾತಿಗೆ ಮರ ಈ ಪುಟ್ಟ ಹಕ್ಕಿ ನನ್ನಂಥ ದೊಡ್ಡಮರಕ್ಕೆ ಬುದ್ಧಿ ಹೇಳುವುದು ಎಂದರೇನು ಎಂದುಕೊಂಡಿತು. "ನೀನ್ಯಾರು ನನಗೆ ಬುದ್ಧಿ ಹೇಳುವುದಕ್ಕೆ?" ಎಂದಿತು. ಬುದ್ಧಿಮಾತು ಹೇಳಲು ನಾನೇನು ಹಿರಿಯನಲ್ಲ ಆದರೆ ಅನುಭವದ ಮಾತು. ಅನುಭವದ ಮಾತನ್ನು ಯಾರೇ ಹೇಳಿದರೂ ಕೇಳಬೇಕು" ಎಂದಿತು. "ನಿನ್ನ ಮಾತು ಯಾರಿಗೆ ಬೇಕು, ಹೋಗಾಚೆ" ಎಂದು ಹೇಳಿ ಆ ಬಡವನಿಗೆ ತನ್ನ ಮರದ ತುದಿಯ ಕಾವು ಕೋಲನ್ನು ಕೊಟ್ಟಿತು. ಅದನ್ನು ಅಚ್ಚುಕಟ್ಟಾಗಿ ಕೊಡಲಿಗೆ ಸೇರಿಸಿಕೊಂಡ. ಮರ ಕಡಿಯಲು ಪ್ರಾರಂಭಿಸಿದ. ಕೊಡಲಿಗೆ ಕಾವು ಇದ್ದುದ್ದರಿಂದ ಸುಲಭದಲ್ಲಿ ಹೆಚ್ಚು ಹೆಚ್ಚು ಮರ ಕಡಿಯತೊಡಗಿದ. ಮಾರಿದಾಗ ಹೆಚ್ಚು ಹಣ ಬಂತು. ಅದರಿಂದ ಖುಷಿಯಾಗಿ ಕಾಡಿನಲ್ಲಿದ್ದ ಮರಗಳನ್ನೆಲ್ಲ ಕಡಿಯತೊಡಗಿದ. ಶ್ರೀಮಂತನಾಗಿ ಪಟ್ಟಣಕ್ಕೆ ಹೋಗಿ ವಾಸ ಮಾಡಿದ. ಕಾಡನ್ನು ಬರಿದು ಮಾಡಿದ್ದ ಆ ಕಾಡಿನ ಮರಗಳಲ್ಲಿದ್ದ ಹಕ್ಕಿ ಪಕ್ಕಿ, ಕ್ರಿಮಿಕೀಟ, ಹಣ್ಣು ಹೂ, ಎಲ್ಲವೂ ನಾಶವಾಗಿ ಕಾಡೂರು ಹೋಗಿ ಹಾಳೂರು ಆಯಿತು. ಅದಕ್ಕೇ ಹಿರಿಯರು ಹೇಳುವ ಮಾತು, "ಅನುಭವದಲ್ಲಿ ಅಮೃತತತ್ವವಿದೆ."

8 ತುಳಸಿಯ ವಿನಯ



ರತ್ನನಗರಿಯಲ್ಲಿ ಹಸಿರು ಎಲೆಗಳ ತೋಟಗಳು ಅಸಂಖ್ಯಾತವಾಗಿದ್ದವು. ಜನಸಾಮಾನ್ಯರು ರತ್ನನಗರಿಯನ್ನು ಎಲೆಯೂರು ಎಂದೇ ಕರೆಯುತ್ತಿದ್ದರು. ತುಂಬೆ ಎಲೆಯಿಂದ ಹಿಡಿದು ಬಾಳೆ ಎಲೆವರೆಗೆ ನಾನಾ ಆಕಾರದ ಗಾತ್ರದ ಎಲೆಗಳ ಗಿಡಮರಗಳು ಸೊಂಪಾಗಿ ಬೆಳೆದು ಎಲ್ಲೆಲ್ಲೂ ಹಸಿರು ತಾಂಡವವಾಡುತ್ತಿತ್ತು.

ಒಮ್ಮೆ ಅಲ್ಲಿಯ ಗಿಡಮರಗಳಲ್ಲಿ, "ನನ್ನ ಮರದ ಎಲೆ ಶ್ರೇಷ್ಠ, ನನ್ನ ಗಿಡದ ಎಲೆ ಶ್ರೇಷ್ಠ" ಎಂಬ ಅಹಂಕಾರ ಬೆಳೆಯತೊಡಗಿತು. ತುಳಸಿಯ ಗಿಡ ಮಾತ್ರ ಮಾತಾಡದೆ ತಪಸ್ವಿಯ ಹಾಗೆ ಮೌನವಾಗಿತ್ತು.

ಮಾವಿನಮರದೆಲೆ ಮಂಗಳ ಕಾರ್ಯಗಳಿಗೆ ನಾನೇ ಮುಖ್ಯ. ಕಲಶಕ್ಕಿಡಲೂ ನಾನೇ ಬೇಕು. ಹಬ್ಬದ ತೋರಣಕ್ಕೂ ನನ್ನದೇ ಎಲೆ, ಕೊಂಬೆಗಳೇ ಬೇಕು... ನಾನೇ ಶ್ರೇಷ್ಠ" ಎಂದು ಜಂಬ ಪಟ್ಟಿತು.

ಬಳ್ಳಿಯ ವೀಳ್ಯದೆಲೆ ತಾಂಬೂಲಕ್ಕೆ ನಾನೇ ಬೇಕು. ಮಂಗಳ ಕಾರ್ಯಗಳಲ್ಲಿ ನಾನಿಲ್ಲದೆ ಆಗುವುದಿಲ್ಲ. ಯಾರಿಗಾದರೂ ಯುದ್ಧಕ್ಕೆ ಆಹ್ವಾನ ಕೊಟ್ಟರೆ ಆಗ ಕೊಡುವ ರಣವೀಳ್ಯ ನಾನೇ" ಎಂದಿತು.

"ಹಬ್ಬದೂಟ ಆಗಲಿ ತಿಥಿ ಊಟ ಆಗಲಿ, ಊಟಕ್ಕೆ ಬೇಕಾಗುತ್ತೇನೆ" ಎಂದು ಬಾಳೆ ಎಲೆ ಬೀಗಿತು.

"ಅಡಿಗೆಗೆ ರುಚಿ ಬರಲು ಇಂಗು, ಉಪ್ಪು ಮೊದಲಾದವು ಎಂಬ ಮಾತು ಹಾಗಿರಲಿ ನಾನಿದ್ದರೇನೇ ನಿಜವಾದ ರುಚಿ ಮಜ್ಜಿಗೆಗೆ ಎಂದು" ಕರಿಬೇವು ಕೊಚ್ಚಿಕೊಂಡಿತು.

ಹೀಗೆ ಒಂದೊಂದು ಗಿಡ - ಮರದ ಎಲೆಗಳು ಅಹಂ ಪಡುತ್ತಿದ್ದಾಗ ತೋಟದ ದಾರಿಯಲ್ಲಿ ಹೋಗುತ್ತಿದ್ದ ಮುನಿಗಳನ್ನು



"ನಮ್ಮಲ್ಲಿ ಯಾರು ಶ್ರೇಷ್ಠ ಹೇಳಿ" ಎಂದು ಕೇಳತೊಡಗಿದವು.

ಆಗ ಮುನಿ ಹೇಳಿದ, "ಮಾವಿನ ಎಲೆಯೇ ನೀನು ತೋರಣವಾಗುವುದು ನಿಜ. ನಿನ್ನನ್ನು ಬಾಗಿಲಿಗೆ ನೇತುಹಾಕುತ್ತಾರೆ ಗೊತ್ತೇ? ವೀಳ್ಯದೆಲೆಯೇ ನಿನ್ನನ್ನು ತಾಂಬೂಲಕ್ಕೆ ಸೇರಿಸಿ ಸವಿಯುತ್ತಾರೆ. ಆದರೆ ನಿನ್ನನ್ನು ಜಗಿದು ಆಚೆಗೆ ಉಗುಳುತ್ತಾರೆ.

ಕರಿಬೇವು ಅಡಿಗೆಗೆ ರುಚಿ ಕೊಡುತ್ತೆ ನಿಜ, ಉಪ್ಪಿಟ್ಟಿಗೆ, ಮಜ್ಜಿಗೆ ಸಾರಿಗೆ ಎಲ್ಲಕ್ಕೂ ಹಾಕುತ್ತಾರೆ ನಿಜ. ಆದರೆ ಯಾರೂ ತಿನ್ನುವುದಿಲ್ಲ ಆರಿಸಿ ತೆಗೆದು ಆಚೆಗೆ ಹಾಕುತ್ತಾರೆ ತಿಳಿಯಿತೇ.

ಬಾಳೆ ಎಲೆ ಊಟ ಸೊಗಸಾಗಿರುತ್ತೆ. ನೋಟಕ್ಕೆ ಅಂದ ಊಟಕ್ಕೆ ಚಂದ. ಅದಕ್ಕೇನು ಬಂತು. ಉಂಡ ಮೇಲೆ ಎಲೆಯನ್ನು ತಿಪ್ಪೆಗೆ ಎಸೆಯುತ್ತಾರೆ.

ಹೀಗೆ ನಿಮ್ಮನ್ನೆಲ್ಲ ಬಳಸಿಕೊಂಡು ಜನ ನೇತು ಹಾಕುತ್ತಾರೆ, ಉಗುಳುತ್ತಾರೆ, ತಿಪ್ಪೆಗೆ ಎಸೆಯುತ್ತಾರೆ, ಹೊರಕ್ಕೆ ತೆಗೆದಿಡುತ್ತಾರೆ ಯಾರೂ ನಿಮ್ಮನ್ನು ಸ್ವೀಕರಿಸುವುದಿಲ್ಲ. ನಿಮ್ಮ ಅಹಂಕಾರಕ್ಕೆ ಶಾಸ್ತಿ ಮಾಡುತ್ತಾರೆ.

ಆದರೆ ಯಾವ ರೀತಿಯೂ ಅಹಂಕಾರ ಪಡದ ಮೌನದಿಂದ ಸದಾ ಧ್ಯಾನ ಮಾಡುತ್ತಿರುವ ತಪಸ್ವಿಯಂತಿರುವ ತುಳಸಿಯನ್ನು ಎಲ್ಲರೂ ಪೂಜಿಸುತ್ತಾರೆ. ಏಕೆಂದರೆ "ವಿನಯಕ್ಕೆ ಬೆಲೆ" ಎಂದು ಮುನಿ ಹೇಳಿದಾಗ ಎಲ್ಲ ಎಲೆಗಳು ತಲೆ ತಗ್ಗಿಸಿದವು.

9 ಬೇವಿನಮರ ಮತ್ತು ತೆಂಗಿನಮರ



ಬೇವಿನೂರು ಒಂದು ಹಳ್ಳಿ. ಗಿಡದಪ್ಪನವರು ಆ ಹಳ್ಳಿಯ ಶಾಲೆಯ ಮಾಸ್ತರು. ಅವರಿಗೆ ಗಿಡಮರಗಳೆಂದರೆ ಪ್ರಾಣ. ಆ ಹಳ್ಳಿಯ ಶಾಲೆಗೆ ಬಂದಾಗ ಶಾಲೆಯ ಸುತ್ತಮುತ್ತ ಗಿಡಮರ ಬೆಳೆಸಿ ತೋಟ ಮಾಡಿ ಗುಡ್ಡದ ಶಾಲೆಯನ್ನು 'ತೋಟದ ಶಾಲೆ' ಮಾಡಿದರು.

ಪ್ರತಿ ಶನಿವಾರ ಬೆಳಗ್ಗೆ ಶಾಲೆ ಮುಗಿದಾಗ ಮತ್ತು ಭಾನುವಾರ ಬೆಳಗ್ಗೆ ಶಾಲೆಯ ವಿದ್ಯಾರ್ಥಿಗಳನ್ನು ಊರಾಚೆ ಕಾಡಿನಲ್ಲಿ ಹಳ್ಳಿಯ ತೋಟ ತುಡಿಕೆಗಳ ನಡುವೆ ಕರೆದುಕೊಂಡು ದಾರಿಯಲ್ಲಿ ತಾವು ತಂದ ಬುತ್ತಿಗಂಟಿನಿಂದ ತಿಂಡಿ ಕೊಡುತ್ತಿದ್ದರು. ಕಥೆ ಹೇಳುತ್ತಿದ್ದರು; ತಮಾಷೆ ಮಾಡಿ ನಗಿಸುತ್ತಿದ್ದರು. ಅವೆಲ್ಲ ಇಷ್ಟವಾಗಿ ಹತ್ತಾರು ಹುಡುಗರು ಅವರ ಜತೆಗಿರುತ್ತಿದ್ದರು.

ಹೀಗೆ ರಜೆ ದಿನ ಪ್ರವಾಸ ಹೊರಟಾಗ ಮೇಷ್ಟ್ರು ಒಂದು ಚೀಲದಲ್ಲಿ ಬುತ್ತಿ ಇದ್ದರೆ ಇನ್ನೊಂದು ಚೀಲದಲ್ಲಿ ಬೇವಿನ ಬೀಜಗಳು

ಇರುತ್ತಿದ್ದವು. ದಾರಿಯ ಬದಿಯಲ್ಲಿ ಖಾಲಿಯಿದ್ದ ಜಾಗಗಳಲ್ಲಿ ಹುಡುಗರ ಕೈಲಿ ಬೇವಿನ ಬೀಜಗಳನ್ನು ನೆಡಿಸಿ ಹತ್ತಿರದ ದೊಣೆ, ಹಳ್ಳಗಳ ನೀರನ್ನು ಹನಿಸುತ್ತಿದ್ದರು.

ಒಮ್ಮೆ ಊರಿನ ಶ್ರೀಮಂತರೊಬ್ಬರು ಕೇಳಿದರು, "ಮೇಷ್ಟೇ, ನಿಮಗ್ಯಾಕೆ ಈ ಹುಚ್ಚು, ಮುಡಿಯೋ ಹೂವಿನ ಗಿಡವಲ್ಲ. ತಿನ್ನೋ ಹಣ್ಣಿನ ಗಿಡವಲ್ಲ. ಕಹಿ ಬೇವಿನ ಬೀಜಗಳನ್ನು ಹುಡುಗರ ಕೈಲಿ



ನೆಡಿಸುತ್ತಿದ್ದೀರಿ. ಅದರ ಹೂವನ್ನು ಮುಡಿಯೋಕೆ ಆಗುತ್ತಾ? ಅದರ ಹಣ್ಣು ತಿನ್ನೋಕೆ ಆಗುತ್ತಾ?"

ಅದಕ್ಕೆ ಮೇಷ್ಟು ಉತ್ತರಿಸಿದರು, "ಅದರ ಹಣ್ಣು ನಮಗೆ ಕಹಿ, ಹಕ್ಕಿಗಳಿಗೆ ಸಿಹಿ. ಅದರ ನೆರಳು ಪ್ರಾಣಿಗಳಿಗೆ, ದಾರಿಗರಿಗೆ ಹಿತ. ಬೇವಿನ ಗಾಳಿ ಆರೋಗ್ಯಕರ." ಅದಕ್ಕೆ ಶ್ರೀಮಂತರು ಕೇಳಿದರು, "ಅದು ಸರಿ. ಈಗ ನೀವು ನೆಟ್ಟ ಬೀಜಗಳು ಮರ ಆಗುವುದು ಯಾವಾಗ, ಅದರ ನೆರಳು ನಿಮಗೆಲ್ಲಿ ಸಿಗುತ್ತೆ, ನಿಮ್ಮ ಕಾಲದ ಹಕ್ಕಿಗಳಿಗೆ ಎಲ್ಲಿ ಸಿಗುತ್ತವೆ ಹಣ್ಣುಗಳು?"

ಅದಕ್ಕೆ ಗಿಡದಪ್ಪನವರು ಹೇಳಿದ್ದು ಹೀಗೆ, "ನಮ್ಮ ಹಳ್ಳಿಯಲ್ಲಿ ತೆಂಗಿನಕಾಯಿ ಅಡಿಗೆಗೆ ಬಳಸುತ್ತೇವೆ, ಎಳನೀರು ಕುಡೀತೀವಿ. ಚಪ್ಪರಕ್ಕೆ ಹೊಂಬಾಳೆ – ಗರಿಗಳನ್ನು ಬಳಸುತ್ತೇವೆ ಅಲ್ಲವೇ?" "ಹೌದು" ಎಂದರು ಶ್ರೀಮಂತರು.

ಆಗ ಮೇಷ್ಟು ಹೇಳಿದರು, "ಆ ತೆಂಗಿನಮರಗಳನ್ನೆಲ್ಲ ನಾವು ಬೆಳೆಸಿದ್ದಾ? ನಮ್ಮ ಹಿರಿಯರು ತಮಗೆ ಕೊಬ್ಬರಿ ಎಳನೀರು ಸಿಗಬೇಕು ಅಂದಿದ್ದರೆ ಇಂದು ನಮಗೆ ತೆಂಗು, ಎಳನೀರು ಸಿಗುತ್ತಿತ್ತಾ. ಹಿಂದಿನವರ ಫಲ ನಮಗಿಂದು. ಅದರ ಋಣ ತೀರಿಸಬೇಕಾದರೆ ಇಂದಿನವರ ಫಲ ಮುಂದಿನವರಿಗೆ." ಶ್ರೀಮಂತರು ಮೇಷ್ಟ ಮಾತಿಗೆ ಮೆಚ್ಚಿ ಅವರ ಕೆಲಸದಲ್ಲಿ ತಾವೂ ಕೈ ಜೋಡಿಸಿದರು.

10 ಮರುಭೂಮಿಯಲ್ಲಿ ಬಿರುಗಾಳಿ ಏಕೆ?



ಆನಂದಪುರದಲ್ಲಿ ರಾಮಪ್ಪ, ಭೀಮಪ್ಪ ಎಂಬ ಇಬ್ಬರು ಗೆಳೆಯರಿದ್ದರು. ಸೂರ್ಯೋದಯವಾದಾಗ ಹಿತವಾದ ಬಿಸಿಲಿನಲ್ಲಿ ಹಾಯಾದ ತಂಗಾಳಿಯಲ್ಲಿ ಎಲ್ಲ ಕಡೆ ಗಿಡ ಮರಗಳಲ್ಲಿ ಹೂ ಹಣ್ಣು ಬಿಟ್ಟು ಸುಂದರವಾಗಿತ್ತು. ದಿನವೂ ಆ ನಂದಪುರ ನದಿಯ ಬದಿಯಲ್ಲಿ ರಾಮಪ್ಪ ದೋಣಿ ನಡೆಸುತ್ತಾ ನದಿಯ ದಡದ ಆಚೆ ಈಚೆ ಸಂತೋಷವಾಗಿ ಜನರನ್ನು ಸಾಗಿಸುತ್ತಾ ಜೀವನ ನಡೆಸುತ್ತಿದ್ದ. ಒಬ್ಬ ಮಗನೊಂದಿಗೆ ಹೆಂಡತಿ ಜೊತೆ ಪುಟ್ಟ ಗುಡಿಸಲಿನಲ್ಲಿ ಸರಳ ಜೀವನ ನಡೆಸುತ್ತಿದ್ದ. ಆನಂದಪುರ ನಿಜಕ್ಕೂ ಅವನ ಪಾಲಿಗೆ ಆನಂದಪುರವೆನಿಸಿತ್ತು.

ಆ ಊರಿನ ನದಿಯ ದಡದಲ್ಲಿದ್ದ ಭೀಮಪ್ಪನ ತೋಟದಲ್ಲಿ ಅಪರೂಪದ ಎಂಟು ಭಾಗ್ಯವೃಕ್ಷಗಳಿದ್ದವು. ಆ ಅಪರೂಪದ ಮರಗಳಲ್ಲಿ ಎಲೆಗಳಿಗಿಂತ ಜಾಸ್ತಿ ಹಣ್ಣುಗಳು ಬಿಡುತ್ತಿದ್ದವು. ಅವುಗಳ ರುಚಿ ಅಮೃತದಂತಿತ್ತು. ಆ ರೀತಿ ಹಣ್ಣುಗಳು ಇನ್ನಲ್ಲೂ ಸಿಗುತ್ತಿರಲಿಲ್ಲ.

ಆದ ಕಾರಣ ಹೆಚ್ಚು ಬೆಲೆಗೆ ಮಾರಾಟವಾಗಿ ಹಣ ಸಿಗುತ್ತಿತ್ತು. ವರ್ಷವೆಲ್ಲಾ ಆ ಹಣ್ಣುಗಳ ಮಾರಾಟದಿಂದಲೇ ಜೀವನ ಸಾಗಿತ್ತು.

ಇಬ್ಬರೂ ಊರ ದೇವತೆ ಅಭಯೇಶ್ವರಿಯ ಭಕ್ತರಾಗಿದ್ದರು. ಊರಲ್ಲಿ ಪ್ರತಿ ವರ್ಷ ಅಭಯೇಶ್ವರಿ ಜಾತ್ರೆ ನಡೆಯುತ್ತಿತ್ತು. ಆಗ ರಾಮಪ್ಪನಿಗೆ ದೋಣಿ ನಡೆಸುವುದರಿಂದ ಹಾಗೂ ಭೀಮಪ್ಪನಿಗೆ ಹಣ್ಣಿನ ಮಾರಾಟದಿಂದ ತುಂಬ ಹಣ ಸಿಗುತ್ತಿತ್ತು. ಆಗ ದೊರೆತ



ಹೆಚ್ಚಿನ ಹಣದಲ್ಲೇ ಜಾತ್ರೆಗೆ ಬಂದವರಿಗೆ ಅನ್ನದಾನ ಮಾಡುತ್ತಿದ್ದರು. ಹೀಗೆ ಅವರು ಸಂತೋಷವಾಗಿರುವಾಗ ಒಂದು ದಿನ ಪ್ರಳಯ ಕಾಲದ ಬಿರುಗಾಳಿಯೊಂದು ಬೀಸಿ ಬಂದಿತು.

ಹೊಳೆಯಲ್ಲಿ ರಾಮಪ್ಪನಿಗೆ ದೋಣಿ ಮುಳುಗಿ ನಾಶವಾಗುವ ಭಯ. ದಡದಲ್ಲಿದ್ದ ಭಾಗ್ಯವೃಕ್ಷಗಳು ಧರೆಗುರುಳುವ ಭಯ ಭೀಮಪ್ಪನಿಗೆ ಆಯಿತು. ಇಬ್ಬರೂ ದೇವಿ ಅಭಯೇಶ್ವರಿಯನ್ನು ಪ್ರಾರ್ಥಿಸಿ ಮೊರೆಯಿಟ್ಟರು. "ದೇವಿ, ಬಿರುಗಾಳಿಯಿಂದ ನಮ್ಮೂರನ್ನು, ನಮ್ಮ ದೋಣಿ ಹಾಗೂ ಮರಗಳನ್ನು ರಕ್ಷಿಸು. ನಾವು ನಿನ್ನ ಜಾತ್ರೆ ಕಾಲದಲ್ಲಿ ಉಚಿತವಾಗಿ ದೋಣಿ ನಡೆಸಿ ಸೇವೆ ಮಾಡುತ್ತೇವೆ" ಎಂದು ರಾಮಪ್ಪ, "ಜಾತ್ರೆಗೆ ಬಂದ ಭಕ್ತರಿಗೆ ಉಚಿತವಾಗಿ ಹಣ್ಣುಗಳನ್ನು ಹಂಚುತ್ತೇವೆ" ಎಂದು ಭೀಮಪ್ಪ ಹರಕೆ ಹೊತ್ತರು.

ಆಗ ದೇವತೆ ಪ್ರಸನ್ನಳಾಗಿ ಆ ಬಿರುಗಾಳಿಯನ್ನು ಕುರಿತು, "ನೀನು ನದಿಯ ಊರುಗಳ ಮೇಲೆ ಬೀಸಬೇಡ" ಎಂದಳು. "ಮತ್ತೆ ಎಲ್ಲಿಗೆ ಸಂಚರಿಸಲಿ?" ಎಂದಾಗ, "ಮರುಭೂಮಿಗಳಲ್ಲಿ ಸಂಚರಿಸು" ಎಂದು ದೇವಿ ಆಜ್ಞಾಪಿಸಿದಳು. ಅಂದಿನಿಂದ ಮರುಭೂಮಿಗಳಲ್ಲಿ ದಿನೇ ದಿನೇ ಬಿರುಗಾಳಿ ಬಿರುಸಾಗಿ ಬೀಸುವುದನ್ನು ಕಾಣುತ್ತೇವೆ.

11 ಪಾರಿಜಾತ ಮತ್ತು ತುಂಬಿಗಳು




ಆ ಊರಿನ ಹೆಸರೇ ಪಾರಿಜಾತಪುರ. ಏಕೆಂದರೆ ಊರೆಲ್ಲ ಪಾರಿಜಾತ ಗಿಡಗಳೇ. ಪಾರಿಜಾತದ ಹೂಗಳ ಮಕರಂದ ಅಲ್ಲಿಯ ದುಂಬಿಗಳಿಗೆ ಜೀವಾಧಾರ ವಾಗಿತ್ತು. ಬೇರೆ ಹೂವಿನ ಮಧುವನ್ನು ಹೀರಿದರೂ ಆ ದುಂಬಿಗಳಿಗೆ ಪಾರಿಜಾತದ ಬಣ್ಣ, ಆಕಾರ, ವಾಸನೆ, ಚೆಲುವು ಎಲ್ಲ ತುಂಬಾ ಇಷ್ಟವಾಗಿದ್ದವು. ಎಲ್ಲ ದುಂಬಿಗಳೂ ಪಾರಿಜಾತದ ಹೂಗಳನ್ನೇ ಹೊಗಳಿ ಹಾಡುತ್ತಿದ್ದವು.

ಆಗ ಆ ಮರದಲ್ಲಿದ್ದ ಪಾರಿಜಾತಕ್ಕೆ ಅಹಂಕಾರ ತಲೆಗೇರಿ, "ನನ್ನನ್ನು ಬಿಟ್ಟರೆ ಇಲ್ಲ" ಎಂದು ಬೀಗತೊಡಗಿತು. ಆಗ ಮರದ ಎಲೆಗಳು ಹೇಳಿದವು, "ನಾವು ಸೂರ್ಯನಿಂದ ಶಾಖ ಹೀರಿ, ನೆಲದ ಬುಡದಿಂದ ರಸ ಹೀರಿ ನಿನಗೆ ನೀಡದಿದ್ದರೆ ನಿನ್ನಲ್ಲಿ ಮಕರಂದ ಎಲ್ಲಿ ಬರುತ್ತದೆ? ಅದಿಲ್ಲದಿದ್ದರೆ ದುಂಬಿಗಳು ಏಕೆ ಬರುತ್ತವೆ" ಎಂದವು.

ಆಗ ಮರದ ಬೇರುಗಳು ಎಲೆಗಳಿಗೆ ಹೇಳಿದವು. "ಭೂಮಿಯಿಂದ ಗೊಬ್ಬರದ ಸಾರ ಹೀರಿ ನೀರಿನಲ್ಲಿ ಬೆರೆಸಿ ಅದನ್ನು

ಪರಿಪಕ್ವಗೊಳಿಸಿ ಸೂರ್ಯನ ಶಾಖದಲ್ಲಿ ಹದಮಾಡಿ ಮರೆಯಿಂದ ಸರಬರಾಜು ಮಾಡುವವರೇ ನಾವು" ಎಂದವು. ಊಟದ ಮನೆಯಲ್ಲಿ "ಅಡಿಗೆ ಮನೆಯಿಂದ ಬರುವ ಅಡಿಗೆ ರುಚಿಸುತ್ತದೆ. ಆದರೆ ಅಡಿಗೆ ಹೇಗಾಯಿತು ಎಂಬುದು ತಿಳಿಯುವುದಿಲ್ಲ. ಭೂಮಿಯ ಒಳಗಿರುವ ನಾವಾಗಲೀ ನಮ್ಮ ಸೇವೆಯಾಗಲಿ ಯಾರಿಗೂ ತಿಳಿಯುವುದಿಲ್ಲ" ಎಂದವು ಬೇರುಗಳು.



ಬೇರುಗಳ ಮಾತನ್ನು ಕೇಳಿದ ದುಂಬಿಗಳು ಹೇಳಿದವು, "ಈಗ ನಮಗೆ ಸತ್ಯ ತಿಳಿಯಿತು. ಪಾರಿಜಾತದಲ್ಲಿ ಸಿಗುವ ಮಕರಂದ ಕೇವಲ ಹೂವಿನದಲ್ಲ. ಎಲೆಗಳು, ಕೊಂಬೆಗಳು, ಬೇರುಗಳು, ಭೂಮಿಯ ಸಾರದ ಫಲ, ಮಳೆಯ ಕೃಪೆ, ಸೂರ್ಯನ ಶಾಖದ ದಯೆ, ಬೀಸುವ ಗಾಳಿ, ಹರಿಯುವ ನೀರಿನ ಕಾರುಣ್ಯ – ಇವೆಲ್ಲದರ ಅನುಗ್ರಹದಿಂದ ನಮಗೆ ಮಧು ಸಿಗುತ್ತದೆ. ನಾವು ಕೃತಜ್ಞತೆಯನ್ನು, ಉಪಕಾರ ಸ್ಮರಣೆಯನ್ನು ಕಣ್ಣೆದುರಿಗೆ ಇರುವವರಿಗಷ್ಟೇ, ಹೊರಗೆ ಕಾಣಿಸುವ ಹಾಗೆ ಕೆಲಸ ಮಾಡುವವರಿಗಷ್ಟೇ ಸಲ್ಲಿಸಿದರೆ ಸಾಲದು. ಕಣ್ಣಿಗೆ ಕಾಣದ ಬೇರು, ಭೂಮಿಯ ಸಾರ, ಸೂರ್ಯನ ಶಾಖ, ಗಾಳಿ, ಬೆಳಕಿನ ಪರಿಣಾಮ ಮೊದಲಾದವುಗಳಿಗೂ ಕೃತಜ್ಞತೆ ಸಲ್ಲಿಸಬೇಕು. ಕೇವಲ ಪಾರಿಜಾತ ಹೂವನ್ನಷ್ಟೇ ಹೊಗಳುವುದು ಸರಿಯಲ್ಲ" ಎಂದು ತಿಳಿದವು.

"ಭೂಮಂಡಲದಲ್ಲಿ ಕಾಣುವವರಿಗಿಂತ ಸಮಾರಂಭಗಳಲ್ಲಿ ಹೆಚ್ಚಿನ ಜನ ತೆರೆಮರೆಯಾಗಿ ದುಡಿಯುತ್ತಾರೆ. ಅವರೆಲ್ಲರನ್ನು ಗುರುತಿಸಬೇಕು" ಎಂದುಕೊಂಡವು ದುಂಬಿಗಳು.

12 ಬಿದಿರು ಕಲಿಸಿದ ಪಾಠ



ಸದ್ಗುರು ಪಾಠಶಾಲೆ ಜ್ಞಾನಪುರದಲ್ಲಿ ಪ್ರಸಿದ್ಧ ಗುರುಕುಲವೆನಿಸಿತ್ತು. ಬೇರೆ ದೇಶಗಳ ರಾಜಕುಮಾರರು ವಿಶೇಷವಾಗಿ ಅಲ್ಲಿಗೆ ಕಲಿಯಲು ಬರುತ್ತಿದ್ದರು. ಏಕೆಂದರೆ ಅಲ್ಲಿಯ ಗುರುಕುಲಾಧಿಪತಿಗಳಾದ ಸರ್ವಜ್ಞಾಚಾರ್ಯರು ತಮ್ಮದೇ ಆದ ವಿಧಾನದಲ್ಲಿ ಶಿಷ್ಯರಿಗೆ ವಿದ್ಯೆ ಕಲಿಸುತ್ತಿದ್ದರು. ನೀತಿ ತಿಳಿಸುತ್ತಿದ್ದರು. ಉಳಿದ ಗುರುಕುಲಗಳಿಗಿಂತ ಈ ರೀತಿ ಇದು ಭಿನ್ನವಾಗಿತ್ತು. ಸರ್ವಜ್ಞಾಚಾರ್ಯರು ಎಂದೂ ಬರೀ ಬಾಯಿಮಾತಿನಲ್ಲಿ ಇದು ಸರಿ, ಅದು ತಪ್ಪು ನೀನು ಹಾಗಿರು ಹೀಗಿರು, ನೀನು ಅದು ಮಾಡು ಇದು ಮಾಡಬೇಡ ಎಂದು ಉಪದೇಶ ಮಾಡುತ್ತಿರಲಿಲ್ಲ; ತರಗತಿಯಲ್ಲಿ ಪಾಠ ಮಾಡುತ್ತಿರಲಿಲ್ಲ.

ಒಮ್ಮೆ ಅವರ ಬಳಿ ಶಿಷ್ಯ ವೃತ್ತಿಗೆ ತರಳೆಕಾಂತರಸು ಎಂಬ ರಾಜಕುಮಾರ ವಿದ್ಯೆ ಕಲಿಯಲು ಬಂದ. ಅವನಿಗೆ ಬಿದಿರನ್ನು ಕಂಡರೆ ಆಗುತ್ತಿರಲಿಲ್ಲ. ಬಿದಿರಿನಲ್ಲಿ ಉಳಿದ ಮರಗಳಂತೆ ಹಣ್ಣುಕಾಯಿ ಹೂಗಳಿಲ್ಲ. ಸುವಾಸನೆ ಇಲ್ಲವೇ ಇಲ್ಲ. 'ನಿಷ್ಪ್ರಯೋಜಕ ನೀರಸ ಸಸ್ಯ

ಅದು' ಎಂದು ಸದಾ ಬಿದಿರನ್ನು ಹಳಿಯುತ್ತಿದ್ದ. ಆ ವಿಷಯ ಗುರುಗಳ ಕಿವಿಗೆ ಬಿತ್ತು.

ಗುರುಗಳು ಮಾರನೆಯ ದಿನವೇ ಒಂದು ವಿಶೇಷ ಯಜ್ಞವನ್ನು ಪ್ರಾರಂಭಿಸಿದರು. ಬಿದಿರನ್ನು ಯಾರೂ ಬಳಸಬಾರದು ಎಂದು ಆಜ್ಞೆ ಮಾಡಿದರು. ಇದರಿಂದ ಬಿದಿರು ದ್ವೇಷಿ ಶಿಷ್ಯನಿಗೆ ಸಂತೋಷವಾಯಿತು. ಅಂದಿನಿಂದ ಬಿದಿರಿನ ಬುಟ್ಟಿಗಳಲ್ಲಿ ಹೂ



ತರುವ ಬದಲು ಬಿಂದಿಗೆಗಳಲ್ಲಿ ಹೂ ತರುತ್ತಿದ್ದರು. ಬಿದಿರಿನ ಮೊರಗಳಲ್ಲಿ ದವಸ ಕೇರುತ್ತಿದ್ದುದನ್ನು ಹಿತ್ತಾಳೆ ಮೊರಗಳಲ್ಲಿ ಕೇರಲಾರಂಭಿಸಿದರು. ಬಿದಿರಿನ ತೊಟ್ಟಿಲ ಬದಲು ಲೋಹದ ತೊಟ್ಟಿಲನ್ನು ಆಶ್ರಮದ ಮಕ್ಕಳಿಗೆ ಬಳಸಿದರು. ಬಿದಿರಿನ ಸೌಟು ಬದಲು ಲೋಹದ ಸೌಟನ್ನು ಯಾಗದಲ್ಲಿ ಬಳಸಿದರು. ಬಿದಿರಿನ ಚಾಪೆ ಬದಲು ಲೋಹದ ಚಾಪೆ ಬಳಸಿದರು.

ಹೀಗೆ ಬಿದಿರಿನ ಬದಲು ಲೋಹದ ಪದಾರ್ಥಗಳನ್ನು ಬಳಸಲು ಪ್ರಾರಂಭಿಸಿದಾಗ ಕೆಲವು ದಿನಗಳ ನಂತರ ಹೂವುಗಳಿಗಿಂತ ಬಿಂದಿಗೆ ಭಾರವಾಯಿತು. ಬಿದಿರು ಮೊರದಲ್ಲಿ ಕಸ ಹೋಗುತ್ತಿದ್ದಂತೆ ಲೋಹದ ಮೊರದಲ್ಲಿ ಹೋಗಲಿಲ್ಲ. ಕಬ್ಬಿಣದ ಲೋಹದ ತೊಟ್ಟಿಲು ತುಕ್ಕು ಹಿಡಿಯಿತು. ಲೋಹದ ಸೌಟು ಬಿಸಿಯೇರಿ ಯಾಗ ಮಾಡಲು ಅಗ್ನಿಗೆ ತುಪ್ಪ ಹೊಯ್ಯಲು ಕಷ್ಟವಾಯಿತು. ಲೋಹದ ಚಾಪೆ ಚಳಿಗಾಲದಲ್ಲಿ ಮಲಗಿದಾಗ ಕೊರೆಯಲಾರಂಭಿಸಿತು. ಶಿಷ್ಯರೆಲ್ಲ ಬಿದಿರು ದ್ವೇಷಿ ಶಿಷ್ಯನನ್ನು ದೂಷಿಸಲಾರಂಭಿಸಿದರು. ಆ ಶಿಷ್ಯನಿಗೆ ತನ್ನ ತಪ್ಪಿನ ಅರಿವಾಗಿ ಬಿದಿರಿನ ಮಹಿಮೆ ತಿಳಿದು ಗುರುಗಳಲ್ಲಿ ಕ್ಷಮೆ ಕೇಳಿದನು. ಮತ್ತೆ ಬಿದಿರನ್ನು ಎಲ್ಲರೂ ಬಳಸಿದರು

13 ಕಾಲ್ಚೆಂಡೇ, ದುಷ್ಟರ ಮಾತನ್ನು ಕೇಳಬೇಡ....



ಲಕ್ಷ್ಮೀ ನರ್ತನವನದಲ್ಲಿ ವಿಶಾಲ ಹಣ್ಣಿನಮರಗಳ ನಡುವೆ ಆಟದ ಮೈದಾನವಿತ್ತು. ಆ ದೊಡ್ಡ ಮೈದಾನದಲ್ಲಿ ಬುಟ್ಟಿಚೆಂಡು (ಬ್ಯಾಸ್ಕೆಟ್‌ಬಾಲ್), ಕಾಲ್ಚೆಂಡು (ಫುಟ್‌ಬಾಲ್), ಬಲೆಚೆಂಡು (ಬ್ಯಾಡ್ಮಿಂಟನ್) ಇತ್ಯಾದಿ ಚೆಂಡಿನಾಟಗಳನ್ನು ಮಕ್ಕಳು ದಿನಾ ಆಡುತ್ತಿದ್ದರು. ಚೆಂಡಿನತೋಟ ಎಂದೇ ಆ ಊರನ್ನು ಕರೆಯುತ್ತಿದ್ದರು. ಪ್ರತಿ ದಿನವೂ ಆಟ ಮುಗಿದ ಮೇಲೆ ಕಾಲ್ಚೆಂಡಿನಾಟ ಆಡುತ್ತಿದ್ದವರು ಅಲ್ಲೇ ಯಾವುದಾದರೂ ಮರದ ಕೆಳಗೆ ಚೆಂಡನ್ನು ಬಿಟ್ಟು ಹೋಗುತ್ತಿದ್ದರು. ಕಾಲ್ಚೆಂಡಿನಾಟದಲ್ಲಿ ಚೆಂಡನ್ನು ಒಂದೊಂದು ಸಲ ಒದ್ದಾಗಲೂ ಒಂದೊಂದು ಹಣ್ಣಿನ ಮರದ ಬಳಿ ಹೋಗಿ ಬೀಳುತ್ತಿತ್ತು. ಹಾಗೆ ಒಂದೊಂದು ಮರದ ಬಳಿ ಚೆಂಡು ಬಿದ್ದಾಗ ಆ ಮರದ ಹಣ್ಣಿನ ರುಚಿ ವಾಸನೆಗಳನ್ನು ತಿಳಿದು ಜೀವನದಲ್ಲಿ ನಾನು ಹಾಗಾಗಬೇಕು ಎಂದುಕೊಳ್ಳುತ್ತಿತ್ತು ಆ ರಬ್ಬರ್ ಚೆಂಡು (ಫುಟ್‌ಬಾಲ್).

ಮಾವಿನ ಮರದ ಬಳಿ ಬಿದ್ದಾಗ, ಮಾವಿನ ಹಣ್ಣಿನ ಹಾಗೆ ಸಿಹಿಯಾಗಿರಬೇಕು ಎಂದುಕೊಂಡರೆ, ತೆಂಗಿನಮರದ ಬುಡಕ್ಕೆ ಬಿದ್ದಾಗ ಎಳನೀರಿನ ಹಾಗೆ ಬಾಯಾರಿಕೆ ಹೋಗಿಸಬೇಕು ಎಂದುಕೊಳ್ಳುತ್ತಿತ್ತು. ಸಂಪಿಗೆ ಮರದ ಬಳಿ ಬಿದ್ದಾಗ, ಸಂಪಿಗೆ ಹೂವಿನ ಹಾಗೆ ಬಾಳು ಸುಗಂಧವಾಗಿರಬೇಕು ಎಂದುಕೊಳ್ಳುತ್ತಿತ್ತು. ಹೀಗೆ ಒಂದೊಂದು ಮರದಿಂದ ಒಂದೊಂದು ಗುಣವನ್ನು ಸಜ್ಜನರ ಸಹವಾಸದಿಂದ ಸದ್ಗುಣ ಸಂಪಾದನೆ ಎಂಬಂತೆ ಕಲಿಯುತ್ತಿತ್ತು.



ಹೀಗಿದ್ದಾಗ ಚೆಂಡು ದೂರ ಹೋಗದಿರಲಿ ಅಂತ ಮೈದಾನದ ಬಳಿ ಕೆಲವು ಹೂ ಗಿಡಗಳಿಗೆ ಮುಳ್ಳಿನ ಗಿಡದ ಬೇಲಿ ಹಾಕಿದ್ದರು. ಮುಳ್ಳಿನ ಗಿಡದ ಬಳಿ ಚೆಂಡು ಬಂದಾಗಲೆಲ್ಲ ಮುಳ್ಳಿನ ಬೇಲಿ ಉಪದೇಶ ನೀಡುತ್ತಿತ್ತು, "ಎಲೈ ಚೆಂಡೇ, ಒಬ್ಬೊಬ್ಬರು ಒದ್ದಾಗಲೂ ಒಂದೊಂದು ಮರದ ಬಳಿ ಬಂದು ಬೀಳುವೆ. ಮತ್ತೆ ತೆಗೆದುಕೊಂಡು ನಿನ್ನನ್ನು ಒದೆಯುತ್ತಾರೆ. ಹೀಗೇಕೆ ಒದೆಸಿಕೊಂಡು ಇರುವೆ. ನನ್ನಲ್ಲಿ ಬಾ ಬಚ್ಚಿಟ್ಟುಕೋ ಅವರಿಗೆ ಸಿಗೋಲ್ಲ" ಎಂದಿತು.

ಹೌದಲ್ಲ ಎಂದು ಮುಳ್ಳಿನ ಬೇಲಿಯಲ್ಲಿ ಮರೆಯಾಯಿತು. ಹುಡುಗರು ಬೇರೆ ಚೆಂಡಿನಿಂದ ಆಡತೊಡಗಿದರು. ಮುಳ್ಳಿನ ಬೇಲಿಯ ನಡುವೆ ಸಿಕ್ಕಿಕೊಂಡ ಕಾಲ್ಚೆಂಡಿಗೆ ಗಾಳಿ ಹೋಗಿ ಚೆಂಡು ಬಟ್ಟಲಾಯಿತು. ಮಳೆ ಬಂದಾಗ ನೀರು ತುಂಬಿಕೊಂಡಿತು. ಸೊಳ್ಳೆ, ಜೇಡ, ಕಸ ಎಲ್ಲ ತುಂಬಿ ನಾರತೊಡಗಿತು. ವಾಸನೆ ಬಂದಿತು. ತೋಟಗಾರ ಅದನ್ನು ತೆಗೆದು ಕಸದ ಗಾಡಿಗೆ ಎತ್ತಿ ಎಸೆದ. ಎಲ್ಲರ ಆಟಕ್ಕೆ ಕಾರಣವಾಗಿ ಸಂತೋಷಕೊಡುತ್ತಿದ್ದ ಚೆಂಡು, ಹಣ್ಣಿನ ಮರಗಳಿಂದ ಗುಣಪಾಠ ಕಲಿಯುತ್ತಿದ್ದ ಚೆಂಡು, ಮುಳ್ಳಿನ ಬೇಲಿಯ ದುಷ್ಟ ಸಹವಾಸ ಮಾತಿನಿಂದ ಹಾಳಾಯಿತು. ದುಷ್ಟರ ಮಾತು ದುರ್ಬುದ್ಧಿಗೆ ಕಾರಣ, ಶಿಷ್ಟರ ಮಾತು ಸದ್ಬುದ್ಧಿಗೆ ಕಾರಣ.

14 ಬಂಡೆ ಸಂದಿ ಹೂವಿನ ಕಥೆ



ನಮ್ಮೂರು ಶಿಲಾಪುರ ಏಕೆ ಗೊತ್ತೆ? ಕಲ್ಲುಬಂಡೆಗಳ ಗುಡ್ಡ ನಮ್ಮೂರು. ಹಳ್ಳಿಗರು ಬಂಡೆಬೆಟ್ಟ ಎಂದೇ ಗುಡ್ಡವನ್ನು ಕರೆಯುತ್ತಾರೆ. ಆ ಊರಲ್ಲಿ ಬಂಡೆಗಳೇ ಹೊರತು ಮರಗಳೇ ಇರಲಿಲ್ಲ. ಒಮ್ಮೆ ಜೋರಾಗಿ ಗಾಳಿ ಬೀಸಿ ಒಂದು ಹೂವಿನ ಗಿಡದ ಬೀಜ ಕಲ್ಲುಬಂಡೆ ಸಂದಿಯಲ್ಲಿ ಸಿಕ್ಕಿಕೊಂಡಿತು. ಬೀಜ ಮತ್ತೆ ಗಾಳಿ ಬೀಸಿದಾಗ ಹಾರಿ ಹೋಗಲಿಲ್ಲ. ಬಂಡೆ ಕೇಳಿತು, "ಇಲ್ಲೇಕೆ ಉಳಿದುಕೊಂಡೆ?" ಬೀಜ ಹೇಳಿತು, "ನನಗಿಲ್ಲಿ ಇರಲು ಆಸೆ. ಚೆನ್ನಾಗಿ ಬಿಸಿಲು ಬರುತ್ತೆ, ಗಾಳಿ ಬೀಸುತ್ತೆ, ಆಕಾಶ ಸದಾ ಕಾಣಿಸುತ್ತೆ. ಬಂಡೆ ಮೇಲೆ ಬಿದ್ದರೆ ಗಾಳಿ ಬೀಸಿದಾಗ, ಮಳೆ ಬಿದ್ದಾಗ, ಜಾರಿಹೋಗುತ್ತೇನೆ. ಹಾರಿ ಹೋಗುತ್ತೇನೆ" ಎಂದಿತು. ಬಿರುಕು ಬಂಡೆ ಹೇಳಿತು, "ಸರಿ, ಇಲ್ಲೇ ಇರು ನನಗೇನೂ ತೊಂದರೆ ಇಲ್ಲ" ಎಂದಿತು.

ಆಗಾಗ ಆ ಬಂಡೆ ಬೆಟ್ಟದಲ್ಲಿ ಬಿರುಗಾಳಿ ಬೀಸಿದಾಗ ಎಲ್ಲಿಂದಲೋ ಒಂದಿಷ್ಟು ಮಣ್ಣು ಧೂಳೆದ್ದು ಸೇರಿತು. ಮಳೆ ಬಿದ್ದಾಗ

ಆ ಮಣ್ಣು ಒದ್ದೆಯಾಗಿ ಬೀಜ ಮೊಳೆಯಿತು. ಬಿಸಿಲು ಬಿದ್ದು ಬೀಜ ಸಸಿ ಆಯಿತು. ಅಲ್ಲೇ ಗಿಡವಾಗಿ ಬಣ್ಣ ಬಣ್ಣದ ಹೂವುಗಳು ಬಿಟ್ಟಿದ್ದವು. ನೋಡಿದವರಿಗೆ ಆ ಹೂವುಗಳು ಆನಂದ ತರುತ್ತಿದ್ದವು. ಹೀಗಿದ್ದಾಗ ಒಮ್ಮೆ ಬೆಟ್ಟ ಹತ್ತುವ ಯುವಕರ ತಂಡ 'ಚಾರಣ' ಬಂದಿತು. ಆ ತಂಡದಲ್ಲಿ ಹುಡುಗಿಯರೂ ಇದ್ದರು. ಬೆಟ್ಟ ಹತ್ತುವಾಗ ಬಂಡೆ ಸಂದಿಯ ಈ ಗಿಡದ ಹೂವುಗಳನ್ನು ನೋಡಿ ಇಬ್ಬರು ಹುಡುಗಿಯರು ಸಂತೋಷಪಟ್ಟರು. ಒಬ್ಬಳು ಬೆಟ್ಟದ ಮೇಲಿನ ಮಲ್ಲಿಕಾರ್ಜುನನಿಗೆ



ಅರ್ಪಿಸಲು ಹೂವು ಕಿತ್ತಳು, ಇನ್ನೊಬ್ಬಳು ಈ ಹೂವು ಮುಡಿದರೆ ನಾನೇ ಚೆಲುವೆ ಎನ್ನಿಸುವೆ ಎಂದು ಹೂವು ಕಿತ್ತಳು. ಆ ಹೂವಿನ ಗಿಡಕ್ಕೆ, "ಈ ಕಲ್ಲು ಬಂಡೆ ಸಂದಿಯಲ್ಲಿ ಎಷ್ಟು ಚೆನ್ನಾಗಿ ಬೆಳೆದಿದ್ದಿ. ನೀರು ಗೊಬ್ಬರ ಹಾಕಿ ಬೇಲಿಕಟ್ಟಿ ಕಾವಲುಗಾರರನ್ನು ಇಟ್ಟ ರಾಜನ ತೋಟದಲ್ಲೂ ಇಂಥ ಪರಿಮಳದ ಆಕರ್ಷಕ ಹೂವನ್ನು ಕಂಡಿಲ್ಲ ಧನ್ಯವಾದಗಳು" ಎಂದರು. ಆಗ ಆ ಹೂವು ಹೇಳಿತು, "ನೀವು ನನಗಲ್ಲ ಕೃತಜ್ಞತೆ ಹೇಳಬೇಕಾದ್ದು, ನನಗೆ ಆಶ್ರಯಕೊಟ್ಟ ಈ ಬಂಡೆ ಬೆಟ್ಟಕ್ಕೆ." "ಬಂಡೆ ಹೂವನ್ನು ಬೆಳೆಯುತ್ತಾ?" ಎಂದು ಕೇಳಿದರು.

"ನಿಜವಾಗಿ ಉಪಕಾರ ಮಾಡುವವರು ಬೇರೆಯವರಿಗೆ ಕಾಣಿಸುವುದಿಲ್ಲ. ಅವರ ಉಪಕಾರ ಮಾಡಿಸಿಕೊಂಡವರಿಗೆ ಮಾತ್ರ ಗೊತ್ತಾಗುತ್ತದೆ. ಆಶ್ರಯಕೊಟ್ಟ ಬಂಡೆ, ಮಣ್ಣು ತಂದ ಗಾಳಿ, ಮಳೆ ಸುರಿಸಿದ ನೀರು, ಶಾಖಕೊಟ್ಟ ಸೂರ್ಯ ನಿಮಗೆ ಕಾಣಿಸುತ್ತಿಲ್ಲ. ನಾನು ಮಾತ್ರ ಕಾಣಿಸುತ್ತಿದ್ದೇನೆ. ಉಪಕಾರ ಮಾಡಿದ ಅವರಿಗೆ ಸಲ್ಲಬೇಕು ಧನ್ಯವಾದ" ಎಂದಿತು ಆ ಹೂವು.

15 ಮನೆ ಬಿಟ್ಟು ಹೊರಡಿ–ಬದುಕಿಕೊಳ್ಳಿ



ಹೇಮನಗಿರಿ ರಾಜ್ಯದಲ್ಲಿದ್ದ ಪುಷ್ಪಾರಣ್ಯ ಹಳದಿ ಹೂವಿನ ಕಾಡಾಗಿತ್ತು. ಎಲ್ಲೆಲ್ಲಿ ನೋಡಿದರೂ ಅಲ್ಲಿ ಹರಿಯುತ್ತಿದ್ದ ಜುಳುಕಾವತಿ ನದಿಯ ದಂಡೆಗಳಲ್ಲಿ ಉದ್ದಕ್ಕೂ ಹಳದಿ ಹೂವಿನ ಮರಗಳು ಬೆಳೆದಿದ್ದವು. ನದಿ ದಡದ ಮರಗಳ ಬುಡಗಳಲ್ಲಿ, ನೀರಿನಲ್ಲಿ ಜೊಂಡು ಬೆಳೆದಿತ್ತು. ಆ ಜೊಂಡಿನಲ್ಲಿ ಮತ್ತು ಮರಗಳಲ್ಲಿ ಮರದ ಪೊಟರೆಗಳಲ್ಲಿ ಅಸಂಖ್ಯ ಹಕ್ಕಿಗಳು ವಾಸವಾಗಿದ್ದವು. ಆ ಎಲ್ಲ ಹಕ್ಕಿಗಳಿಗೆ ಹಳದಿ ಮರಗಳ ಬೀಜಗಳೇ ಆಹಾರವಾಗಿದ್ದವು.

ಒಮ್ಮೆ ಬೇರೆ ಕಾಡಿನ ಹಕ್ಕಿಗಳು, "ನಿಮ್ಮಲ್ಲಿ ಇರುವಷ್ಟು ಗಿಡಮರಗಳ ಬೀಜಗಳು ನಮ್ಮಲ್ಲಿ ಇಲ್ಲ. ನಿಮ್ಮ ಕಾಡಿನ ಹಕ್ಕಿಗಳ ದೊರೆಯೇ ನಮಗೂ ದೊರೆ ಆಗಲಿ. ನಾವೆಲ್ಲ ಬಂದು ನಿಮ್ಮ ಕಾಡಲ್ಲೇ– ಪುಷ್ಪಾರಣ್ಯದಲ್ಲೇ ವಾಸಿಸುತ್ತೇವೆ" ಎಂದವು. ಆ ಮಾತು ಕೇಳಿ ಪುಷ್ಪಾರಣ್ಯದ ಹಕ್ಕಿ ರಾಜನಿಗೆ ಸಂತೋಷ ಆಯಿತು. ಆ ಕಾಡಿನಲ್ಲಿ ಕಾಶಿಗೆ ಹೋಗುತ್ತಿದ್ದ ಪ್ರಯಾಣಿಕರ ತಂಡ ಪ್ರಯಾಣ ಮಾಡುತ್ತಾ ಬಂತು. ಕಾಡಿನ ದಾರಿ ಉದ್ದಕ್ಕೂ ಬಣ್ಣದ ಬೀಜಗಳು. ಆ ಬೀಜಗಳ

ಹೂಗಳು ನೆಲದ ಮೇಲೆ ಹರಡಿ ಹೂವಿನ ಹಾಸಿಗೆ ಹಾಸಿದಂತೆ ಇತ್ತು. ನದೀ ದಡದಲ್ಲಿ ಸಾಲು ಸಾಲಾಗಿ ಸೈನಿಕರಂತೆ ನಿಂತ ಮರಗಳ ಹೂಗಳು, ಬೀಜಗಳು ತೇಲುತ್ತಿದ್ದವು. ಮೈಲಿಗಟ್ಟಲೆ ಹರಡಿದ ಹೂವಿನ ದಾರಿ ಸುವಾಸನೆ, ನೆರಳು ಕಂಡು ಸಂತೋಷಗೊಂಡ ಪ್ರಯಾಣಿಕರು, "ಮರಗಳೇ ಇಡೀ ಕಾಡಿನಲ್ಲಿ ಹೀಗೆ ಹಬ್ಬಿಕೊಂಡಿದ್ದೀರಲ್ಲ ನಿಮ್ಮ ಗುಟ್ಟೇನು? ಹೀಗೆ ಎಲ್ಲ ಕಡೆ ವ್ಯಾಪಿಸಿರುವ ಹಳದಿ ಗಿಡಗಳನ್ನು ಎಲ್ಲೂ



ಕಂಡಿಲ್ಲ. ಅದರಲ್ಲೂ ಜೊಂಡಿನ ಹಕ್ಕಿಗಳಿಗೆ, ಮರದ ಹಕ್ಕಿಗಳಿಗೆ ಆಹಾರ ಒದಗಿಸುವ ಬೀಜ–ಹೂಗಳ ಮರಗಳನ್ನು ನಾವೆಲ್ಲೂ ಕಂಡಿಲ್ಲ" ಎಂದು ಮರಗಳನ್ನು ಹೊಗಳಿದರು.

"ಇದರ ಗುಟ್ಟೇನು" ಎಂದು ಕೇಳಿದರು. ಆಗ ಮರಗಳ ರಾಜ ಹೇಳಿದ: "ಇದರಲ್ಲಿ ಗುಟ್ಟೇನೂ ಇಲ್ಲ. ಇರುವುದು ಸತ್ಯ ಅಷ್ಟೆ. ನಾವು ಬೀಜಗಳಾಗಿದ್ದಾಗ ದೂರ ದೂರದ ಕಾಡುಗಳಿಂದ ನಾನಾ ರೀತಿ ಹಕ್ಕಿಗಳು ಬಂದು ತಮ್ಮ ಕೊಕ್ಕಿನಲ್ಲಿ ಬೀಜಗಳನ್ನು ಸಿಕ್ಕಿಸಿಕೊಂಡು ತಮ್ಮ ಗೂಡಿಗೆ ಹೋಗಿ ಮರಿಗಳಿಗೆ ಕೊಡಲು ಬರುತ್ತವೆ. ಆಗ ನಾವು, 'ಮರಕ್ಕೆ ಬಲವಾಗಿ ಕಚ್ಚಿಕೊಳ್ಳಬೇಡಿ. ಸುಲಭವಾಗಿ ಅವುಗಳ ಕೊಕ್ಕುಗಳಿಗೆ ಸಿಕ್ಕಿಕೊಳ್ಳಿ. ಅವು ಹಾರುವಾಗ ಅಲ್ಲಲ್ಲೇ ಜಾರಿಕೊಂಡು ಆಯಾ ಪ್ರದೇಶದಲ್ಲೇ ಹರಡಿಕೊಳ್ಳಿ. ಮನೆ ಬಿಟ್ಟು ಹೊರಗೆ ಹೋಗದಿದ್ದರೆ ಬದುಕು ಸಾಗೊಲ್ಲ. ಜಗತ್ತಿನ ಎಲ್ಲೆಡೆ ಹರಡಿಕೊಳ್ಳಬೇಕು' ಎಂದು ನಮ್ಮ ಬೀಜಗಳಿಗೆ ಹೇಳುತ್ತೇವೆ." ಎಂದು ಮರಗಳ ರಾಜ ಹೇಳಿದ ಮಾತನ್ನು ಕೇಳಿ ಪ್ರಯಾಣಿಕರು ಬೆರಗಾದರು. ಆ ಪ್ರಯಾಣಿಕರ ತಂಡಕ್ಕೆ ಮರಗಳ ಭಾಷೆ ಗೊತ್ತಿತ್ತು.

16 ಜಂಬದ ನೆರಳಿನ ಮರದ ಗರ್ವಭಂಗ



ಶಾಲೆಯೊಂದರಲ್ಲಿ ದೊಡ್ಡದೊಂದು ಬಣ್ಣದೆಲೆ ಮರ ಇತ್ತು. ಅದನ್ನು 'ನೆರಳಿನ ಮರ' ಎಂದೇ ಜನ ಕರೆಯುತ್ತಿದ್ದರು. ಏಕೆಂದರೆ ಆ ಮರದ ಕೆಳಗೆ ಮಧ್ಯಾಹ್ನ ಆದರೂ ಬಿರುಬೇಸಿಗೆಯಲ್ಲೂ ಸೂರ್ಯನ ಕಿರಣ ಒಂದು ನೆಲಕ್ಕೆ ಬೀಳುತ್ತಿರಲಿಲ್ಲ. ಹೊರಗೆ ರಣ ರಣ ಬಿಸಿಲು ಕಾಯುತ್ತಿದ್ದರೂ ಮರದ ಕೆಳಗೆ ತಂಪಿನ ಮನೆ ಇದ್ದಹಾಗಿತ್ತು. ಊರಿನ ದನಗಳೆಲ್ಲ ಅಲ್ಲೇ ವಿಶ್ರಮಿಸುತ್ತಿದ್ದವು. ಪ್ರಯಾಣಿಕರು ಸುಧಾರಿಸಿಕೊಳ್ಳುತ್ತಿದ್ದ ಜಾಗ ಅದೇ ಆಗಿತ್ತು. ಮರದ ಬುಡದಲ್ಲಿ ಪುಣ್ಯಾತ್ಮರು ಕಟ್ಟಿಸಿದ ಕಟ್ಟೆ ಮೇಲೆ ಊರಿನ ಜನರೆಲ್ಲ ಕೂತು ಹುಲಿಘಟ್ಟ, ಕವಡೆ, ಪಗಡೆ ಮೊದಲಾದ ಆಟಗಳನ್ನು ಆಡುತ್ತಿದ್ದರು. ಚಿಕ್ಕಮಕ್ಕಳಿಗೆ ಆಟದ ಮೈದಾನ ಆಗಿತ್ತು. ಬಿಸಿಲು ಬಂದರೂ ಮಳೆ ಬಂದರೂ ಆ ಮರ ದಟ್ಟವಾದ ಎಲೆಗಳಿಂದ ಛತ್ರಿಯಂತಿತ್ತು.

ಆ ಊರಿನ ಮತ್ತು ಬೇರೆ ಊರಿನ ಜನರು ಆ ಮರವನ್ನು ಕುರಿತು ಹೊಗಳಲಾರಂಭಿಸಿದರು. ಇದನ್ನು ಕೇಳಿ ಮರದ ಎಲೆಗಳಿಗೆ ಜಂಬ ಬಂದಿತು. "ನನ್ನ ಬಿಟ್ಟರೆ ಇಲ್ಲ. ನನ್ನಿಂದಲೇ ಜನ

ಬದುಕುತ್ತಿದ್ದಾರೆ; ಪ್ರಾಣಿಗಳು, ಹಕ್ಕಿಗಳು ಆಶ್ರಯ ಪಡೆಯುತ್ತವೆ. ಎಲ್ಲರಿಗಿಂತ ನಾನೇ ಲೋಕಕ್ಕೆ ದೊಡ್ಡ ಉಪಕಾರಿ" ಎಂದು ಜಂಬ ಕೊಚ್ಚಿಕೊಂಡಿತು.

ಆಗ ನೆಲದ ಒಳಗಿಂದ ಮರಕ್ಕೆ ಧ್ವನಿಯೊಂದು ಕೇಳಿಸಿತು, "ನಮ್ಮಿಂದ ಬದುಕಿರೋ ನಿಮಗೆಷ್ಟು ಅಹಂಕಾರ? ಜಂಬ ಕೊಚ್ಚಿಕೊಳ್ಳದೆ ತೆಪ್ಪಗಿರಿ" ಎಂದು ಧ್ವನಿ ಹೇಳಿತು. "ಯಾರು ನೀವು, ನಿಮಗಷ್ಟು ಧೈರ್ಯ ನಮ್ಮನ್ನು ದೂಷಿಸಲು?" ಎಂದು ಮರದ ಎಲೆಗಳು ಕೇಳಿದಾಗ, ಧ್ವನಿ ಹೇಳಿತು, "ನಾವು ಬೇರುಗಳು. ನಮ್ಮಿಂದಲೇ ಮಣ್ಣಿನಲ್ಲಿ ಇರುವ ಸಾರವನ್ನು, ನೀರನ್ನು ಹೀರಿಕೊಂಡು ಬೇರುಗಳೆಂಬ ಕೊಳವೆ ಮೂಲಕ ನಿಮಗೆ ಉಣಿಸುತ್ತಿದ್ದೇವೆ. ನೀವು ಹಸಿರಾಗಿ ಒತ್ತಾಗಿ ಜನಕ್ಕೆ, ಪ್ರಾಣಿಗಳಿಗೆ ನೆರಳು ನೀಡುತ್ತಿರುವುದು ಅಷ್ಟೆ. ನಾವಿಲ್ಲದಿದ್ದರೆ ಕೆಲವೇ ದಿನಗಳಲ್ಲಿ ಹಸಿರು ಬಣ್ಣಕ್ಕೆ ಆಮೇಲೆ ಕಂದು ಬಣ್ಣಕ್ಕೆ ತಿರುಗಿ, ಒಣಗಿ ಉದುರಿ ಗಾಳಿಯಲ್ಲಿ ಚಲ್ಲಾಪಿಲ್ಲಿಯಾಗಿ ತಿಪ್ಪೆಗುಂಡಿ ಸೇರುತ್ತೀರಿ" ಎಂದು ನೆಲದಲ್ಲಿದ್ದ ಬೇರುಗಳು ಉಗ್ಗಡಿಸಿದಾಗ ಮರದ ಎಲೆಗಳಿಗೆ ತಪ್ಪಿನ ಅರಿವಾಗಿ ಜಂಬ ಕೊಚ್ಚಿಕೊಳ್ಳುವುದನ್ನು ಅಂದಿನಿಂದ ಬಿಟ್ಟವು.



17 ಹೊರಗಿನ ಬಣ್ಣ-ಒಳಗಿನ ಬಣ್ಣ



ಚಿಕ್ಕಪ್ಪಾಜಿ ಮತ್ತು ದೊಡ್ಡಪ್ಪಾಜಿ ಎಂಬ ಅಣ್ಣತಮ್ಮಂದಿರು ಅಜ್ಜಂಪುರದಲ್ಲಿ ತರಕಾರಿ ತೋಟ ಮಾಡಿ ಇಬ್ಬರೂ ಹೆಸರು ಗಳಿಸಿದ್ದರು. ಅಣ್ಣತಮ್ಮಂದಿಬ್ಬರೂ ಅನ್ಯೋನ್ಯವಾಗಿದ್ದು ತಾವು ಬೆಳೆದ ತರಕಾರಿಗಳನ್ನು ಒಟ್ಟಿಗೆ ಶನಿವಾರದ ಸಂತೆಗೆ ಸಾಗಿಸಿಕೊಂಡು ಹೋಗಿ ತರಕಾರಿಗಳನ್ನು ಮಾರಿ ಹಣ ಹಂಚಿಕೊಳ್ಳುತ್ತಿದ್ದರು.

ಒಮ್ಮೆ ಕಾರ್ತಿಕಮಾಸದ ಜಾತ್ರೆಗೆ ಬೆಳೆದಿದ್ದ ಹಣ್ಣುಕಾಯಿಪಲ್ಯಗಳನ್ನು ಗಾಡಿಗಳಲ್ಲಿ ಮಾರಾಟಕ್ಕೆ ಸಂತೆಗೆ ಮೂಟೆಗಳಲ್ಲಿ ಒಯ್ಯುತ್ತಿದ್ದರು. ಆ ಮೂಟೆಗಳ ನಡುವೆ ಹಸಿಮೆಣಸಿನಕಾಯಿ, ಕೆಂಪು ಮೆಣಸಿನಕಾಯಿ, ಕಲ್ಲಂಗಡಿ ಹಣ್ಣು, ಬೂದುಗುಂಬಳ, ಹೀರೇಕಾಯಿ, ಬದನೆಕಾಯಿ, ಬೆಂಡೆಕಾಯಿ, ಅವರೆಕಾಯಿ ಮೊದಲಾದವು ಇದ್ದವು.

ಪ್ರತಿ ತರಕಾರಿಯೂ ಮಾತನಾಡಿಕೊಳ್ಳುತ್ತಾ ತಮ್ಮ ತಮ್ಮ ಬಣ್ಣಗಳನ್ನು ಕುರಿತು ಚರ್ಚೆ ಮಾಡತೊಡಗಿದವು. "ನಾನು ಹೊರಗೆ ಹಸಿರು, ಒಳಗೆ ಬಿಳಿ ಬಣ್ಣ ಏಕೆ?" ಎಂದು ಕೇಳಿತು ಸೌತೆಕಾಯಿ.

"ನಾನು ಹೊರಗೆ ಕಂದು ಬಣ್ಣ ಒಳಗೆ ಬಿಳಿ ಏಕೆ?" ಎಂದು ತೆಂಗಿನಕಾಯಿ ಕೇಳಿತು. ಕಲ್ಲಂಗಡಿ, "ನಾನು ಹೊರಗೆ ಹಸಿರು, ಒಳಗೆ ಕೆಂಪು ಏಕೆ? ಎಂದುಕೊಂಡರೂ, ನಾನು ಸಿಹಿ ಆಗಿರುತ್ತೇನೆ" ಎಂದಾಗ "ನಾನು ಹೊರಗೆ ಕೆಂಪಾಗಿದ್ದರೂ ಒಳಗೇಕೆ ಖಾರ" ಎಂದು ಕೇಳಿಕೊಂಡಿತು ಕೆಂಪು ಬಣ್ಣದ ಮೆಣಸಿನಕಾಯಿ. ಹೀಗೆ ತರಕಾರಿಗಳು ತಮ್ಮ ಒಳಗಿನ ಹೊರಗಿನ ಬಣ್ಣಗಳ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಅಣ್ಣತಮ್ಮಂದಿರು ದಾರಿಯಲ್ಲಿ ಆಲದಮರದ ಕೆಳಗೆ ಕುಳಿತ ಸರ್ವಜ್ಞ ಮುನಿಗಳೆಂಬ ಧರ್ಮಗುರುವನ್ನು ಕಂಡು ಗಾಡಿಯನ್ನು ನಿಲ್ಲಿಸಿ ನಮಸ್ಕರಿಸಿದರು. ಆಗ ತರಕಾರಿಗಳು ಆ ಗುರುಗಳಿಗೆ ತಮ್ಮ ಬಣ್ಣದ ಸಮಸ್ಯೆಯನ್ನು ಹೇಳಿಕೊಂಡವು.



ದಿವ್ಯಜ್ಞಾನಿಗಳಾದ ಸರ್ವಜ್ಞ ಮುನಿಗಳಿಗೆ ತರಕಾರಿಗಳ ಭಾಷೆ ಗೊತ್ತಿತ್ತು. ಅವುಗಳ ಸಮಸ್ಯೆ ತಿಳಿದಾಗ, ತರಕಾರಿ ಭಾಷೆಯಲ್ಲೇ ಮಾತನಾಡಿದರು. ಅದು ಶಬ್ದವಿಲ್ಲದ ಮೂಕಭಾಷೆಯಾದ್ದರಿಂದ ಅಣ್ಣತಮ್ಮಂದಿರಿಗೆ ತಿಳಿಯಲಿಲ್ಲ.

"ಪ್ರತಿ ಜೀವಿಗೂ ಒಳಗೊಂದು ಬಣ್ಣ ಹೊರಗೊಂದು ಬಣ್ಣ ಇರುತ್ತದೆ. ಹೊರಗಿನ ಬಣ್ಣ ಚೆಲುವನ್ನು ಹೇಳಿದರೆ, ಒಳಗಿನ ಬಣ್ಣ ಗುಣವನ್ನು ಹೇಳುತ್ತದೆ. ಒಳಗಿನ ಬಣ್ಣ ಹೊರಗಿನ ಬಣ್ಣಕ್ಕಿಂತ ಮುಖ್ಯ. ಈಗ ನೋಡಿ ನಿಮ್ಮಲ್ಲಿ ಕಲ್ಲಂಗಡಿ ಹಣ್ಣು ಹೊರಗೆ ಹಸಿರಾಗಿರುತ್ತದೆ, ಒಳಗೆ ಕೆಂಪಾಗಿರುತ್ತದೆ. ಅದೇ ಮೆಣಸಿನಕಾಯಿ ಹೊರಗೆ ಹಸಿರಾಗಿರುತ್ತದೆ, ಒಳಗೆ ಖಾರವಾಗಿರುತ್ತದೆ. ಕಲ್ಲಂಗಡಿಯ ಒಳಗಿನ ಕೆಂಪು ಭಾಗ ಸಿಹಿಯಾಗಿರುವುದರಿಂದ ಅದನ್ನು ಕಲ್ಲಂಗಡಿ ಅಂತ ಕರೆದರೂ ಅದನ್ನು ತಿನ್ನಲು ಇಷ್ಟಪಡುತ್ತಾರೆ. ಮೆಣಸಿನಕಾಯಿ ಹೊರಗೆ ಹಸಿರಾಗಿದ್ದರೂ ಒಳಗೆ ಬೆಳ್ಳಗಿದ್ದರೂ ಖಾರ ಸಹಿಸಲಾಗದು. ಅದನ್ನು ಹಾಗೆ ಯಾರೂ ತಿನ್ನುವುದಿಲ್ಲ. ಅದನ್ನು ತಿಂದಾಗ, ಬಾಯಿ ಖಾರವಾದಾಗ, 'ಉದ್ದುದವನೇ, ಉರಿಮುಖದವನೇ ನಿನಗೇನಾಗಿದೆ ಕೆಟ್ಟ ಮಗನೇ' ಅಂತ ಬೈಯುತ್ತಾರೆ. ತೆಂಗಿನಕಾಯಿ ಹೊರಗೆ ಚಪ್ಪೆ ಕಲ್ಲಿನಂತೆ ಗಟ್ಟಿ, ಒಳಗೆ ಸಿಹಿ ಎಳನೀರು, ರುಚಿಯಾದ ತಿರುಳು. ಅದಕ್ಕೆ ತೆಂಗಿನಕಾಯಿಯನ್ನು ಯಾರೂ ಬೈಯುವುದಿಲ್ಲ. ದ್ರಾಕ್ಷಿ, ಸೇಬುಹಣ್ಣುಗಳು ಹೊರಗೆ ನೋಡಲು ಆಕರ್ಷಕ ಬಣ್ಣ, ಒಳಗೆ ಹುಳಿ ಇದ್ದಾಗ ಥೂ ಅಂತ ಉಗುಳುತ್ತಾರೆ. ಆದ್ದರಿಂದ ಹಣ್ಣುಗಳೇ, 'ಹೊರಗಿನ ಬಣ್ಣ ಮುಖ್ಯವಲ್ಲ, ಒಳಗಿನ ಬಣ್ಣ ಮುಖ್ಯ'" ಎಂದರು ಸರ್ವಜ್ಞಮುನಿಗಳು.

18 ಅಕ್ಕಿಕಾಳು, ಕಡಲೆಕಾಳು, ಸಾಸಿವೆಕಾಳು



ಧರ್ಮಪುರಿಯಲ್ಲಿ ಶ್ರಾವಣಮಾಸದ ಪುರಾಣ ಪ್ರವಚನಕ್ಕೆ ಮೃತ್ಯುಂಜಯ ಸ್ವಾಮಿಗಳನ್ನು ಮೊದಲ ಬಾರಿಗೆ ಕರೆಸಿದ್ದರು. ಅವರು ಮಹಾಜ್ಞಾನಿಗಳೆಂದು ಪ್ರಸಿದ್ಧರಾಗಿದ್ದರು. ಆ ಊರಿನ ಹುಡುಗರು, "ಇವರೆಂಥ ಜ್ಞಾನಿಗಳು ನಮ್ಮ ಹಾಗೇನೇ ಇವರು" ಎಂದು ಭಾವಿಸಿದ್ದರು.

ಬಹಳ ಸಂಭ್ರಮದ ಪ್ರವಚನ ಮುಗಿಸಿ ಎಲ್ಲರಿಗೂ ಆಶೀರ್ವಾದ ಮಾಡಿ ಮಂತ್ರಾಕ್ಷತೆಗಳನ್ನು ನೀಡಿದರು. ಅದನ್ನು ತೆಗೆದುಕೊಂಡ ಭಕ್ತರಲ್ಲಿ ಕೆಲವರು ದಾರಿಯಲ್ಲಿ ಬೀಳಿಸಿಕೊಂಡು ಹೋಗಿದ್ದರು.

ಆ ಊರಿನ ಮೂವರು ಹುಡುಗರು ಬೂದುಗಾಜನ್ನು ಹಿಡಿದು ಸೂರ್ಯನ ಬಿಸಿಲಿನಿಂದ ಕಿರಣಗಳನ್ನು ಒಗ್ಗೂಡಿಸುತ್ತಾ ಕಾಗದ ಸುಟ್ಟು ತಮಾಷೆ ನೋಡುತ್ತಿದ್ದರು. 'ಬೆಂಕಿಯಿಲ್ಲದೆ ಕಾಗದ ಸುಡುತ್ತಿದ್ದೇವೆ' ಎಂದು ಖುಷಿ ಪಡುತ್ತಿದ್ದರು. ದಾರಿಯಲ್ಲಿ ಭಕ್ತರು ಬೀಳಿಸಿಕೊಂಡು ಹೋದ ಅಕ್ಕಿಕಾಳು (ಅಕ್ಷತೆ)ಗಳ ಮೇಲೆ

ಬೂದುಗಾಜನ್ನು ಹಿಡಿದು ನೋಡಿದರು. ಬೂದುಗಾಜನ್ನು ಹಿಮ್ಮುಖ ಮಾಡಿ ಒಬ್ಬ ಅಕ್ಷತೆಯನ್ನು ನೋಡಿದಾಗ ಸಾಸಿವೆಕಾಳಿನ ಹಾಗೆ ಚಿಕ್ಕದಾಗಿ ಕಾಣಿಸಿತು. ಬೂದುಗಾಜನ್ನು ತಿರುಗಿಸಿ ನೋಡಿದಾಗ ಕಡಲೆಕಾಳಿನ ಹಾಗೆ ದಪ್ಪವಾಗಿ ಕಾಣಿಸಿತು. ಅದನ್ನು ಕಂಡ ಅವರು ದಾರಿಯಲ್ಲಿ ಭಕ್ತರು ಸಾಸಿವೆಕಾಳು ಬೀಳಿಸಿಕೊಂಡು ಹೋಗಿದ್ದಾರೆ ಅಂತ ಒಬ್ಬ ಹೇಳಿದರೆ ಇನ್ನೊಬ್ಬ ಕಡಲೆಕಾಳನ್ನು ಬೀಳಿಸಿಕೊಂಡು ಹೋಗಿದ್ದಾರೆ ಎಂದನು. ಅದನ್ನು ನೋಡುತ್ತಿದ್ದ ಮೂರನೆಯ ಹುಡುಗ ಹಸಿರು ಕನ್ನಡಕ ಹಾಕಿಕೊಂಡಿದ್ದ ಅವನು ಅದು ಹೆಸರುಕಾಳು ಎಂದನು.



ಆ ಹುಡುಗರು ಸ್ವಾಮಿಗಳ ಬಳಿ ಹೋಗಿ, "ನೀವು ಭಕ್ತರಿಗೆ ಹೆಸರುಕಾಳು, ಕಡಲೆಕಾಳು, ಸಾಸಿವೆಕಾಳು ಏಕೆ ಕೊಡುತ್ತೀರಿ" ಎಂದು ಕೇಳಿದರು. ಅದಕ್ಕೆ ಸ್ವಾಮಿಗಳು ಹೇಳಿದರು. "ಬರಿಗಣ್ಣಿನಲ್ಲಿ ಸಹಜವಾಗಿ ನೋಡಿ. ಆಕಾರ-ಗಾತ್ರ-ಬಣ್ಣದ ಕನ್ನಡಕ-ಗಾಜುಗಳಿಂದ ನೋಡಬೇಡಿ. ಅವು ಅಕ್ಕಿಕಾಳುಗಳು ತಿಳಿಯಿತೇ" ಎಂದರು. ಮೂವರೂ ಕಕ್ಕಾಬಿಕ್ಕಿಯಾದರು.

19 ಬೈಗುಳಮರ ಮತ್ತು ನಾಯಿಕೊಡೆ



ರಾಮಪುರದಲ್ಲಿ ಮಹೇಶ್ವರನ ಪುರಾತನ ದೇವಸ್ಥಾನವಿತ್ತು. ಆ ದೇವಸ್ಥಾನದ ಸುತ್ತ ಕಾಡು ಬೆಳೆದಿತ್ತು. ಆ ಕಾಡಿನಲ್ಲಿ ಚಿತ್ರ-ವಿಚಿತ್ರ ಮರಗಳು ಬೆಳೆದಿದ್ದವು. ಊರಿನ ತುದಿಯಲ್ಲಿ ಒಂದು ಬಾವಿ ಇತ್ತು. ಬಾವಿಯ ಹತ್ತಿರ ಒಂದು ಕಹಿ ಕಾಯಿಗಳನ್ನು ಬಿಡುತ್ತಿದ್ದ ಮರ ಇತ್ತು. ಅದು ನೋಡಲು ಕೆಂಪಗೆ ಸೇಬಿನ ಹಾಗಿತ್ತು. ಜನರು ಸೇಬು ಎಂದು ಭಾವಿಸಿ ತಿನ್ನಲು ಹೋದಾಗ ಅದು ಹಾಗಲಕಾಯಿಗಿಂತ ಕಟುವಾಗಿ ಆಗಿದ್ದನ್ನು ಕಂಡು ಥೂ ಎಂದು ಉಗುಳಿ ಆ ಮರವನ್ನು ಬೈಯುತ್ತಿದ್ದರು. ಹೀಗಾಗಿ ಆ ಮರವನ್ನು ಬೈಗುಳಮರ ಎಂದು ಕರೆಯುತ್ತಿದ್ದರು.

ಬೈಗುಳಮರದ ಬುಡದಲ್ಲಿ ಬೇಕಾದಷ್ಟು ನಾಯಿಕೊಡೆಗಳು (ಅಣಬೆ) ಬೆಳೆಯುತ್ತಿದ್ದವು. ಜನ ಅವುಗಳನ್ನು ಕಿತ್ತು ಬೇಯಿಸಿಕೊಂಡು ತಿನ್ನುತ್ತಿದ್ದರು. ಅಹಾ! ಎಂಥ ರುಚಿಕರ ಅಣಬೆಗಳು! ಎಂದು ಹೊಗಳುತ್ತಿದ್ದರು.

ಕಹಿ ಕಾಯಿಗಳ ಬೈಗುಳಮರ ಶಾಪಗ್ರಸ್ತ ಮರವಾಗಿತ್ತು. ಒಂದು ಕಾಲದಲ್ಲಿ ಅದು ದೇವವೃಕ್ಷದಂತೆ ಸಿಹಿ ಹಣ್ಣುಗಳನ್ನು ಬಿಡುತ್ತಿತ್ತು.

ದೇವತೆಗಳು ಬಂದು ಅವುಗಳನ್ನು ತಿನ್ನುತ್ತಿದ್ದರಂತೆ. ಆ ಬೈಗುಳಮರ ಆ ಕಾಲದಲ್ಲಿ ದೇವತೆಗಳೇ ಬಂದು ನನ್ನ ಮರದ ಹಣ್ಣುಗಳನ್ನು ತಿನ್ನುತ್ತಾರೆ ಎಂದು ಬೀಗುತ್ತಿತ್ತು. ಒಮ್ಮೆ ಸರ್ವ ಪ್ರಸಿದ್ಧ ಮುನಿಗಳು ಆ ಮರದ ಕೆಳಗೆ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದರು. ಬೈಗುಳಮರ ಅವರ ಕುರುಚಲು ಗಡ್ಡ, ಮಾಸಿದ ಜುಟ್ಟು, ಕೊಳಕು ನಿಲುವಂಗಿ, ಒಣಗಿದ ಮರದ ಕಮಂಡಲವನ್ನು ಕಂಡು ಯಾರೋ ಭಿಕ್ಷುಕ ಇವನು ಎಂದು ಭಾವಿಸಿತು.

ಆ ಸನ್ಯಾಸಿಗೆ ಮರ ಹೇಳಿತು, "ಎಷ್ಟಯ್ಯಾ ಧೈರ್ಯ ನಿನಗೆ? ದೇವತೆಗಳು ಬಂದು ಹಣ್ಣು ತಿನ್ನುವ ಮರ ನಾನು. ನನ್ನನ್ನು ಕೇಳದೆ, ಮಾಡದೆ ಮರದ ಕೆಳಗೆ ವಿಶ್ರಮಿಸಿಕೊಳ್ಳಲು ನಿನಗೆ ಹೇಳಿದವರು ಯಾರು?" ಎಂದು ಗದರಿತು. ಅಷ್ಟೇ ಅಲ್ಲದೆ ಮರದ ಹಣ್ಣುಗಳನ್ನು



ಕಿತ್ತು ತಿನ್ನುತ್ತಿರುವೆ ಎಂದು ಬೈಯತೊಡಗಿತು. ಆಗ ಋಷಿಗೆ ಆ ಮರದ ಅಹಂಕಾರ ಕಂಡು ಕೋಪ ಬಂದಿತು. "ನೀನು, ಸಿಹಿ ಹಣ್ಣಿನ ಮರ ಅಂತಲ್ಲವೇ ನಿನ್ನ ಗರ್ವ. ಇಂದಿನಿಂದ ನಿನ್ನ ಮರದ ಹಣ್ಣುಗಳೆಲ್ಲ ಹಾಗಲಕಾಯಿಯಂತೆ ಕಹಿಯಾಗಲಿ. ನೋಡಲು ಸುಂದರವಾಗಿಯೇ ಇರು, ಜನ ತಿಂದು ಬೈಯುತ್ತಿರಲಿ ಬೈಗುಳ ಮರ ಆಗು" ಎಂದು ಶಪಿಸಿದನು.

ಇಷ್ಟಾದರೂ ಆ ಮರಕ್ಕೆ ಬುದ್ಧಿ ಬರಲಿಲ್ಲ. ಯಾರನ್ನಾದರೂ ಬೈಯುತ್ತಲೇ ಇತ್ತು. ಆ ಮರದ ಕೆಳಗೆ ಅಣಬೆಗಳು ಬೆಳೆದಾಗ ಅವುಗಳನ್ನು ಬೈಯತೊಡಗಿತು. "ಎಲಾ, ಕುಳ್ಳಾಂಟಿ ಅಣಬೆಗಳಿರಾ, ನನ್ನಷ್ಟು ದೊಡ್ಡ ಮರದ ಕೆಳಗೆ ಬೆಳೆಯುವ ನಿಮ್ಮನ್ನು, ಬಂದ ಜನರೆಲ್ಲಾ ಕಿತ್ತು ತಿಂದು ಮೆಚ್ಚುತ್ತಾರೆ. ನನ್ನನ್ನು ಯಾರು ಮುಟ್ಟುವುದಿಲ್ಲ, ನನ್ನನ್ನು ಹೊಗಳಬೇಕು ಎಂದು ನೀವು ಏಕೆ ಹೇಳುವುದಿಲ್ಲ?" ಎಂದು ಕೇಳಿತು.

ಅದಕ್ಕೆ ಅಣಬೆಗಳು, "ಆಕಾಶದೆತ್ತರ ಬೆಳೆದಿದ್ದರೂ ನಿನ್ನ ಹಣ್ಣುಗಳು ನೋಡಲು ಸುಂದರವಾಗಿದ್ದರೂ ಕಹಿ ಕಹಿ. ಯಾರೂ ತಿನ್ನರು. ನಮ್ಮ ಹಾಗೆ ಮೂರ್ತಿ ಚಿಕ್ಕದಾದರೂ ಕೀರ್ತಿ ತರುವಂತಿರಬೇಕು. ಬಲಿಚಕ್ರವರ್ತಿ ಎಷ್ಟು ದೊಡ್ಡವನು. ಆಕರ್ಷಕ ಉಡುಪಿನ ಚಕ್ರವರ್ತಿ ನಿನ್ನ ಹಾಗೆ ಎತ್ತರದವನು. ವಾಮನ ಚಿಕ್ಕವನು. ಬರೀ ಕೌಪೀನ ತೊಟ್ಟವನು ಆದರೂ ಅವನಿಂದ ತುಳಿಸಿಕೊಂಡ. ಅಹಂಕಾರ ಯಾರಿಗೂ ಒಳ್ಳೆಯದಲ್ಲ. ನಿನ್ನ ಹಾಗೆ ಎತ್ತರದ ಆಕರ್ಷಕ ಕಹಿ ಹಣ್ಣಿನಮರ ಆಗಿರುವುದಕ್ಕಿಂತ ನಮ್ಮ ಹಾಗೆ ಜನರಿಗೆ ಆಹಾರವಾಗುವ ಉಪಕಾರದ ಅಣಬೆಗಳಾಗಿರುವುದೇ ಒಳ್ಳೆಯದು" ಎಂದವು. ಅಂದಿನಿಂದ ಬೈಗುಳಮರ ಬೈಯದೆ ತಣ್ಣಗಿತ್ತು.

20 ಜೊಂಡು ಹುಲ್ಲು ಮತ್ತು ದೀಪಸ್ತಂಭ



ರಭಸದ ಜಲಪಾತಗಳನ್ನು, ಮಳೆಗಾಲದಲ್ಲಿ ವೇಗವಾಗಿ ಹರಿಯುವ ತುಂಬು ಪ್ರವಾಹದ ನದಿಗಳನ್ನು ಕಂಡಾಗ ಅಬ್ಬಾ! ಹೋ! ಎನ್ನುತ್ತೇವೆ. ಇನ್ನು ಸಮುದ್ರ ಕಂಡರಂತೂ ಬೆಕ್ಕಸ ಬೆರಗಾಗುತ್ತೇವೆ. ಸಮುದ್ರದಲ್ಲಿ ಏಳುವ ದಡಗಳನ್ನು ಕೊಚ್ಚುವ ಬೃಹತ್ ಅಲೆಗಳನ್ನು ಕಂಡರೆ ಭಯವಾಗುತ್ತದೆ. ರಾಕ್ಷಸರೇ ಯುದ್ಧಕ್ಕೆ ಬಂದಂತೆ, ಬೆಟ್ಟಗಳೇ ಸಾಲಾಗಿ ನುಗ್ಗಿ ಬಂದಂತೆ, ಸಾಗರದ ಅಲೆಗಳು ಅಪ್ಪಳಿಸುತ್ತಿರುತ್ತವೆ. ಅಲೆಗಳ ರಭಸಕ್ಕೆ ಏನೇ ಸಿಕ್ಕರೂ ಕೊಚ್ಚಿ ಹೋಗುತ್ತವೆ. ಬಿರುಗಾಳಿ ಎದ್ದಾಗಲಂತೂ ಹೇಳುವುದೇ ಬೇಡ, ದೋಣಿಗಳೇ ನುಚ್ಚುನೂರಾಗುತ್ತವೆ. ದಡದಲ್ಲಿರುವ ಮನೆಗಳು ಕೊಚ್ಚಿ ಹೋಗುತ್ತವೆ.

ಹೀಗೆ ಮಳೆಗಾಲದಲ್ಲಿ ಒಮ್ಮೆ ಭೀಕರವಾಗಿ ಅಲೆಗಳ ಪ್ರವಾಹ ಎದ್ದಾಗ ಅದರಲ್ಲಿ ಜೊಂಡು ಹುಲ್ಲಿನ ಕಂತೆಯೊಂದು ಸಮುದ್ರದ ದಡದಲ್ಲಿದ್ದ ಹಡಗುಗಳಿಗೆ ದಿಕ್ಕು ತೋರಿಸುವ ಬೆಳಕಿನ ದೀಪಸ್ತಂಭವನ್ನು ನೋಡಿತು. ಕಿಲಕಿಲ ನಕ್ಕು ಗೇಲಿ ಮಾಡತೊಡಗಿತು.

"ದೀಪದ ಕಂಬಣ್ಣಾ, ಕಣ್ಣು ಮಿಟುಕಿಸುತ್ತಾ ಪಿಳಿಪಿಳಿ ಕಣ್ಣು ಬಿಟ್ಟಂತೆ ಬೆಳಕನ್ನು ಮಿಣುಕಿಸುತ್ತಾ ಗರುಡಗಂಬದಂತೆ ಅಲ್ಲಾಡದೆ ನಿಂತಿದ್ದೀಯೆ. ನಿಂದೂ ಒಂದು ಬದುಕೇ? ನಾನಿಲ್ಲಿ ನೋಡು ಮೇಲೆ ಕೆಳಗೆ, ಕೆಳಗೆ ಮೇಲೆ ಜೋಕಾಲಿ ಆಡುತ್ತಾ ಖುಷಿಯಾಗಿದ್ದೇನೆ. ಒಮ್ಮೆ ಮೇಲಕ್ಕೆ ಚಿಮ್ಮುವೆ, ಇನ್ನೊಮ್ಮೆ ಧುಡುಂ ಎಂದು ಕುಪ್ಪಳಿಸುವೆ" ಎಂದು ಕೇಕೆ ಹಾಕಿ ನಗತೊಡಗಿತು.



ಆಗ ದೀಪಸ್ತಂಭ, "ಯಾರಿಗೇ ಆಗಲಿ ಯಾವಾಗಲೇ ಆಗಲಿ ಜಂಭ ಪಡುವುದು, ಅನ್ಯರನ್ನು ಗೇಲಿ ಮಾಡುವುದು ತರವಲ್ಲ" ಎಂದಿತು. "ನನ್ನ ಹಾಗೆ ತೇಲಾಡಲಾಗದೇ ಹಾಗೆ ಹೇಳುವ ನೀನು ಹೇಡಿ" ಎಂದು ಜೊಂಡು ಮತ್ತೆ ಗೇಲಿ ಮಾಡಿತು. ಆ ವೇಳೆಗೆ ಭಾರಿ ಅಲೆಯೊಂದು ಸಮುದ್ರದಲ್ಲಿ ಎದ್ದು ಅಪ್ಪಳಿಸಿ ಆ ಜೊಂಡು ಕಂತೆ ಹುಲ್ಲನ್ನು ರೊಂಯ್ ಎಂದು ದಡದಲ್ಲಿದ್ದ ತಿಪ್ಪೆ ಗುಂಡಿಗೆ ಎಸೆಯಿತು. ಹುಲ್ಲು ಹುಪ್ಪಟೆ ಕಸದ ಮಧ್ಯೆ ಬಿದ್ದ ಜೊಂಡು ಹುಲ್ಲು ಕೊಳೆತು ನಾರಿತು. ದೀಪಸ್ತಂಭ ಅದನ್ನು ಕಂಡು ಅಹಂಕಾರಪಟ್ಟ ಇದಕ್ಕೆ ಎಂಥಾ ಗತಿ ಬಂತು ಅಂತ ಮರುಗಿತು.

21 ಕಲ್ಪವೃಕ್ಷವಾದರೂ ತಲೆ ತಿರುಗಬಾರದು



ತ್ರಿಪ್ರೂರಿನಲ್ಲಿ ತಿರುಮಲಯ್ಯನ ತೆಂಗಿನ ತೋಟಗಳ ಸುತ್ತಮುತ್ತ ಮಲ್ಲಿಗೆ ತೋಟಗಳಿದ್ದವು. ಮಲ್ಲಿಗೆ ತೋಟಗಳನ್ನು ಕಂಡು ತೆಂಗಿನ ತೋಟಗಳು ಜಂಭ ಕೊಚ್ಚಿಕೊಳ್ಳುತ್ತಾ ಹಂಗಿಸುತ್ತಿದ್ದವು. ಮಲ್ಲಿಗೆ ತೋಟಗಳು 'ಅಹಂಕಾರಕ್ಕೆ ಉದಾಸೀನವೇ ಮದ್ದು' ಎಂಬ ಗಾದೆಯಂತೆ ಸುಮ್ಮನಿದ್ದವು. ಆದರೂ ತೆಂಗಿನ ತೋಟಗಳು ಹಂಗಿಸುವುದನ್ನು, ತಮ್ಮನ್ನು ಹೊಗಳಿಕೊಳ್ಳುವುದನ್ನು ಬಿಡಲಿಲ್ಲ.

'ಮಲ್ಲಿಗೆ ತೋಟಗಳೇ ಕೇಳಿರಿ, ಹ್ಹ... ಹ್ಹ... ನಾವೆಷ್ಟು ಎತ್ತರದಲ್ಲಿ ಆಕಾಶದುದ್ದ ಬೆಳೆದಿದ್ದೇವೆ. ನೆಲದ ಮೇಲಿರುವ ನೀವೆಲ್ಲಾ ನಾಚಿಕೊಳ್ಳಿ, ನಿಮ್ಮಲ್ಲಿ ಹಣ್ಣು ಕಾಯಿ ಇದೆಯಾ? ಏನೂ ಇಲ್ಲ. ಬರೀ ಹೂವು ಅಷ್ಟೆ. ನಮ್ಮ ಕಾಯಿಗಳು ಎಷ್ಟು ಸುಂದರವಾದ ಬಣ್ಣ, ಹಸಿರು, ಕೆಂದು ಬಣ್ಣ, ಸಿಪ್ಪೆ ಗಟ್ಟಿ, ಕರಟವಂತೂ ಆಮೆ ಚಿಪ್ಪು. ಏಳು ಕೋಟೆ ದಾಟಿ ಒಳಗೆ ಬಂದರೆ ರಾಜಕುಮಾರಿ ಸಿಗುವಂತೆ ಸಿಪ್ಪೆ ಸುಲಿದು ಕಾಯಿ ಒಡೆದರೆ ಒಳಗೆ ಅಮೃತದಂಥ ಸೀನೀರು. 'ಕಷ್ಟಪಟ್ಟರೆ ಫಲವುಂಟು.

ಸಾಹಸಿಗಳಿಗೆ ಫಲಾಮೃತ' ಎಂದು ಪಾಠ ಕಲಿಸುತ್ತೇವೆ. ತೆಂಗಿನಮರ ಹತ್ತುವುದು ಸುಲಭವಲ್ಲ. ಮಾವಿನಮರ, ಪಾರಿಜಾತದ ಮರದ ಹಾಗೆ ಕುಳ್ಳಲ್ಲ. ಊರ ಬೆಟ್ಟ ಹತ್ತಿದಂತಲ್ಲ. ಹಿಮಾಲಯ ಹತ್ತಿದಂತೆ ತೆಂಗಿನಮರ ಹತ್ತುವುದು. ಗರಿಗಳು ತೂಗಾಡಿದರೆ ರಾಜರಿಗೆ ಸಖಿಯರು ಬೀಸುವ ಉದ್ದನೆ ಚಾಮರದ ಗಾಳಿ ಬೀಸಿದಂತೆ. ಇನ್ನು ನಮ್ಮ ತೆಂಗಿನ ಕೊಬ್ಬರಿಯಿಂದ ಬರುವ ಎಣ್ಣೆ ಎಂದರೆ



ಸುಂದರಿಯರೆಲ್ಲಾ ಕಪ್ಪು ಕೂದಲ ಮಿರಿಮಿರಿನೆ ಮಿಂಚಲು ಹಚ್ಚುತ್ತಾರೆ. ಒಂದೇ ಎರಡೇ ಎಷ್ಟೊಂದು ಉಪಯೋಗ ನಮ್ಮ ಮರದಿಂದ. ಸಮುದ್ರದ ತೀರದ ತುಂಬ ನಾವೇ ನಾವು. ತೆಂಗಿನ ಮರಗಳು ವೃಕ್ಷರಾಜರು, ಕಲ್ಪವೃಕ್ಷಗಳು ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದವು.'

ನೀವು ಕುಳ್ಳಾಂಟಿಗಳು ತಂಗಾಳಿಗೆ ಉದುರುತ್ತೀರಿ. ದಿನದಲ್ಲೇ ಬಾಡುತ್ತೀರಿ. ಬಾಳಿಕೆ ಇಲ್ಲ, ರುಚಿಯಿಲ್ಲ, ಪಚಿಯಿಲ್ಲ ಎಂದೆಲ್ಲ ಹಂಗಿಸುತ್ತಿದ್ದಾಗ ಒಂದು ದಿನ ಸುನಾಮಿಯಂತೆ ಭಾರಿ ಬಿರುಗಾಳಿ ಬೀಸಿ ಬಂತು. ಆ ಚಂಡಮಾರುತಕ್ಕೆ ತೆಂಗಿನ ಮರಗಳೆಲ್ಲ ಬುಡಮೇಲಾಗಿ ನೆಲಕ್ಕೆ ಉರುಳಿ ತೆಂಗಿನ ತೋಟ ನಾಶವಾಯಿತು. ಜಂಭದ ಕೋಳಿಗಳಿಗೆ ಕೇಡಾಗಿತ್ತು.

22 ಮಲ್ಲಿಗೆ ಹೂಗಳನ್ನು ಹೂಳಿದ ಕಥೆ



ಲೋಭಿಮಠದಲ್ಲಿ ಜಿಪುಣಪ್ಪ ಎಂಬ ರೈತನಿದ್ದ. ಹೆಸರಿಗೆ ತಕ್ಕಂತೆ ಕಾಸಿಗೆ ಕಾಸು ಗಂಟು ಹಾಕುವ ಜಿಪುಣ ಆಗಿದ್ದ. ಅವನಿಗೆ ಯಾರೋ ಮಲ್ಲಿಗೆ ತೋಟ ಮಾಡು ಹೆಚ್ಚು ಲಾಭ ಬರುತ್ತದೆ ಎಂದು ಹೇಳಿದ್ದಕ್ಕೆ ತರಕಾರಿ ತೋಟವನ್ನು ಮಲ್ಲಿಗೆ ತೋಟ ಮಾಡಲು ನಿಶ್ಚಯಿಸಿದ. ತೋಟದ ಕೆಲಸಕ್ಕೆ, ಹೂವು ಬಿಡಿಸಲು ಮಕ್ಕಳನ್ನು ಕೆಲಸಕ್ಕೆ ಬೇಕೆಂದು ಅನಾಥಾಲಯಕ್ಕೆ ಹೋಗಿ, "ನಾನು ಅನಾಥ ಮಕ್ಕಳನ್ನು ಸಾಕುತ್ತೇನೆ, ಕೆಲಸ ಕೊಡ್ತೇನೆ, ಸಂಬಳ ಕೊಡ್ತೇನೆ, ಅನ್ನ ಬಟ್ಟೆ ವಾಸಕ್ಕೆ ಜಾಗ ಕೊಡುತ್ತೇನೆ" ಎಂದು ಹತ್ತಾರು ಮಕ್ಕಳನ್ನು ಕರೆತಂದ. ಆದರೆ ಜೀತದಾಳುಗಳಂತೆ ಕೆಲಸ ಮಾಡಿಸಿಕೊಳ್ಳಲು ಪ್ರಾರಂಭಿಸಿದ.

ಅವರಿಗಾರಿಗೂ ಹೊಟ್ಟೆ ತುಂಬಾ ಊಟ ಹಾಕುತ್ತಿರಲಿಲ್ಲ. ಕತ್ತೆ ಚಾಕರಿ ಮಾಡಿಸಿಕೊಳ್ಳುತ್ತಿದ್ದ. "ಊಟಕ್ಕೆ ಎಲ್ಲರೂ ಮನೆಯ ಒಳಗೋಣೆಯಲ್ಲೇ ಇರಬೇಕು, ಹೊರಗೆ ಬಂದರೆ ಬೇಟೆನಾಯಿಗಳನ್ನು ಬಿಟ್ಟಿರುತ್ತೇನೆ, ಅವು ಕಚ್ಚುತ್ತವೆ" ಎಂದು ಹೆದರಿಸಿದ್ದ. "ಆ ನಾಯಿಗಳಿಗೆ ನಿಮ್ಮ ಊಟ ಆಗುವವರೆಗೆ ಊಟ

ಹಾಕುವುದಿಲ್ಲ, ಹಸಿವಿನಿಂದ ಇರುವ ಅವು ನಿಮ್ಮನ್ನು ಕಚ್ಚಿ ತಿಂದು ಹಾಕುತ್ತವೆ" ಎಂದು ಹೆದರಿಸುತ್ತಿದ್ದ. ತಾನು ಹೆಂಡತಿಯೊಂದಿಗೆ ಮೃಷ್ಟಾನ್ನ ಭೋಜನ ಮಾಡುತ್ತಾ, ಮಕ್ಕಳಿಗೆ ಸ್ವಲ್ಪವೇ ಊಟ ಕೊಟ್ಟು ಹಂಚಿಕೊಂಡು ತಿನ್ನಲು ಹೇಳುತ್ತಿದ್ದ. ಮಕ್ಕಳು ಸಾಲದು ಎಂದರೆ "ನೀವು ಮಾಡುವ ಕೆಲಸಕ್ಕೆ ಇಷ್ಟೇ ಊಟ" ಎನ್ನುತ್ತಿದ್ದ. "ಸಂತೆಗೆ ಮಲ್ಲಿಗೆ ಬುಟ್ಟಿ ಹೊತ್ತು ಮಾರುವ ಹೊರಗಿನ ಕೆಲಸ ಅಲ್ಲ" ಎನ್ನುತ್ತಾ, ಓಡಿಹೋಗಲು ಯತ್ನಿಸಿದರೆ ನಾಯಿಗಳನ್ನು ಛೂ... ಬಿಡುವುದಾಗಿ ಹೇಳುತ್ತಿದ್ದ.



23 ಜೈಲಿನಲ್ಲಿದ್ದು ಬೆಳೆ ಬೆಳೆದ ರೈತ



ಸರ್ವಾಧಿಕಾರಿ ಸರ್ವಬಲ್ಲಪ್ಪ ಎಂಬ ಪಾಳೆಯಗಾರ ದರ್ಪದಲ್ಲಿದ್ದು ಎಲ್ಲರೂ ತಾನು ಹೇಳಿದಂತೆ ಕೇಳಬೇಕು ಯಾರೂ ಎದುರುತ್ತರ ಕೊಡಬಾರದು ಎಂದು ಆಳುತ್ತಿದ್ದ. ಬೆಳೆ ಬೆಳೆಯಲು ರೈತರಿಗೆ ವಿಪರೀತ ಬಡ್ಡಿಗೆ ಸಾಲ ಕೊಟ್ಟು ಶೋಷಣೆ ಮಾಡುತ್ತಿದ್ದ. ಬುದ್ಧಿವಂತನೆಂಬ ಬಡರೈತನೊಬ್ಬ ಬೆಳೆ ಬೆಳೆಯಲು ಸಾಲ ಕೇಳಲು ಬಂದ. "ನಮ್ಮ ಮಗಳ ಮದುವೆ ಮಾಡಬೇಕು. ನೀವು ವಿಪರೀತ ಬಡ್ಡಿ ಹಾಕಿದರೆ ಫಸಲೆಲ್ಲ ನಿಮಗೆ ಕೊಡಬೇಕು. ಹಣ ಸ್ವಲ್ಪವೂ ಸಿಗುವುದಿಲ್ಲ ಮತ್ತು ಸಿಕ್ಕಾಪಟ್ಟೆ ಬಡ್ಡಿ ವಸೂಲಿ ಬಡವರಿಂದ ಮಾಡುವುದು ನ್ಯಾಯವಲ್ಲ" ಎಂದ. ಎದುರುತ್ತರ ಕೊಟ್ಟಿದ್ದಕ್ಕೆ ಪಾಳೆಯಗಾರ ಕೆಂಡಾಮಂಡಲವಾಗಿ ಅವನನ್ನು ಜೈಲಿಗೆ ಹಾಕಿಸಿದ. "ಅವನು ನನ್ನನ್ನು ಹೀನಮಾನವಾಗಿ ಬೈದು ಅವಮಾನಿಸಿದ. ಅದಕ್ಕೆ ಜೈಲಿಗೆ ಹಾಕಿಸಿದ್ದೇನೆ" ಎಂದು ಉಳಿದವರಿಗೆ ಹೇಳಿದ. "ಮಳೆ ಬಂದಿದೆ ನೆಲ ಉಳಬೇಕು. ಬೆಳೆ ತೆಗೆಯಬೇಕು ಜೈಲಿಗೆ ಹಾಕಬೇಡಿ" ಎಂದು ಗೋಗರೆದರೂ ಪಾಳೆಯಗಾರ ಕೇಳಲಿಲ್ಲ. ಪಾಳೆಯಗಾರನಿಗೆ ಹೆದರಿಕೊಂಡು ಅವನ ಜಮೀನನ್ನು ಉಳಲು ಯಾರೂ ಬರಲಿಲ್ಲ. ಬೀಜ ಬಿತ್ತನೆ ಮಾಡಲಾಗಲಿಲ್ಲ.

ಆಗ ರೈತ ಜೈಲಲ್ಲೇ ಇದ್ದು ಉಪಾಯ ಮಾಡಿದ. ಜೈಲು ಕಾವಲುಗಾರನಿಗೆ ಕಾಗದ ಒಂದು ಕೊಟ್ಟು, "ಇದನ್ನು ನನ್ನ ಹೆಂಡತಿಗೆ ದಯಮಾಡಿ ಕೊಡಿ. ಅವಳಿಗೊಂದು ರಹಸ್ಯ ವಿಚಾರ ತಿಳಿಸಬೇಕಾಗಿದೆ" ಎಂದ. ರಹಸ್ಯ ಎಂದಕೂಡಲೇ ಅದನ್ನು ತಿಳಿಯುವ ಕುತೂಹಲದಿಂದ, "ಕಾಗದವನ್ನು ಕೊಡುತ್ತೇನೆ" ಎಂದು ಕಾವಲುಗಾರ ತೆಗೆದುಕೊಂಡ. ಓದಿದ. ಅದರಲ್ಲಿ ಬರೆದಿದ್ದು ಇಷ್ಟು, "ಜಮೀನನ್ನು ಉಳುಮೆ ಮಾಡಿಸಲು ಆಳುಗಳು ಸಿಗದಿದ್ದರೆ ಚಿಂತಿಸಬೇಡ. ಸಿಕ್ಕರೂ ಜಮೀನನ್ನು ಉಳುಮೆ ಮಾಡಿಸಬೇಡ.




ಏಕೆಂದರೆ ಅದರಲ್ಲಿ ನಾನು ನಮ್ಮ ತಾತನ ನಿಧಿಯನ್ನು ಬಚ್ಚಿಟ್ಟಿದ್ದೇನೆ. ಉಳಿದವರು ಉತ್ತರೆ ಅವರಿಗೆ ನಿಧಿ ಸಿಕ್ಕಿ ತೆಗೆದುಕೊಳ್ಳುತ್ತಾರೆ" ಎಂದು ಬರೆದಿದ್ದ.

ಅದನ್ನು ಕಾವಲುಗಾರ ಇತರ ಕಾವಲುಗಾರರಿಗೆ ತಿಳಿಸಿದಾಗ ಅವರೆಲ್ಲ ಜೈಲಿನ ಕೆಲಸಕ್ಕೆ ರಜೆ ಹಾಕಿ ಪಾಳೆಯಗಾರರು ಹೇಳಿದ್ದಾರೆ, "ಜಮೀನನ್ನು ಉತ್ತು ಬನ್ನಿ" ಎಂದು ಅದರಂತೆ ಅವರೆಲ್ಲ ಉತ್ತರು. ನಿಧಿ ಮಾತ್ರ ಸಿಗಲಿಲ್ಲ. ಅವರೆಲ್ಲಾ ನಿರಾಶರಾಗಿ ಮರಳಿದರು. ಅವರು ಉತ್ತುಹೋದ ಮೇಲೆ ರೈತನ ಹೆಂಡತಿ ಮಕ್ಕಳು ಬೀಜ ಬಿತ್ತನೆ ಮಾಡಿದರು. ಮಳೆ ಬಂತು ಬೆಳೆ ಬೆಳೆಯಿತು. ಶಿಕ್ಷೆ ಅವಧಿ ಮುಗಿದು ರೈತ ಜೈಲಿನಿಂದ ಹೊರಗೆ ಬಂದನು. ಮನೆಗೆ ಬಂದಾಗ ಹೆಂಡತಿ ಕೇಳಿದಳು, "ಪಾಳೆಯಗಾರ ನಿಮ್ಮ ಜಮೀನನ್ನು ಉಚಿತವಾಗಿ ಉಳುಮೆ ಮಾಡಿಸಿದನೇ? ನಿಮ್ಮನ್ನೇಕೆ ಜೈಲಿಗೆ ಹಾಕಿದ್ದು" ಎಂದು ಕೇಳಿದಳು.

ರೈತ ನಕ್ಕು ಹೇಳಿದನು, "ಪಾಳೆಯಗಾರನಿಗೆ ಈ ವಿಷಯವೇ ತಿಳಿಯದು. ನಾನು ಬರೆದ ಕಾಗದ ನಿನಗೆ ತಲುಪಲಿಲ್ಲ ಅಲ್ಲವೇ?" ಎಂದ. ಯಾವ ಕಾಗದ ಎಂದು ಕೇಳಿದಳು. ಆಗ ತಾನು ಮಾಡಿದ ಉಪಾಯ ಹೇಳಿದ. ಕಾಗದದಲ್ಲಿ, "ತೋಟದಲ್ಲಿ ನಿಧಿ ಇದೆ" ಎಂಬ ಸುದ್ದಿ ಓದಿ ಕಾವಲುಗಾರರು ತಾವೇ ರಜೆ ಹಾಕಿ ಉಳುಮೆ ಮಾಡಿದ್ದರು" ಎಂದ. ಬಡ್ಡಿ ಸಾಲವಿಲ್ಲದೆ ಉಚಿತ ಬೆಳೆ ಬೆಳೆದ ರೈತನ ಜಾಣ್ಮೆಗೆ ಊರಿನ ಜನ ತಲೆ ತೂಗಿದರು. ಪಾಳೆಯಗಾರನಿಗೂ ಕೊನೆಗೂ ರೈತನ ಜಾಣ್ಮೆ ತಿಳಿಯಲಿಲ್ಲ. ಬೆಳೆ ಬೆಳೆಯಲು ಶ್ರಮ ಬೇಕು. ಜಾಣ್ಮೆಯೂ ಬೇಕು.


24 ಹಣ್ಣು ಹೂಗಳ ಸಮಿತಿ



ಹಣ್ಣು ಹೂಗಳ ಸಮಿತಿ ಸಕಲಭಾಗ್ಯಪುರದಲ್ಲಿ ಬಗೆಬಗೆಯ ಹೂವು, ಹಣ್ಣುಗಳ ತೋಟಗಳಿದ್ದವು. ಜನರೂ ಸಕಲಭಾಗ್ಯಪುರ ಎಂದು ಕರೆಯುತ್ತಿರಲಿಲ್ಲ, ಹೂ ಹಣ್ಣೂರು ಎಂದು ಕರೆಯುತ್ತಿದ್ದರು. ಒಮ್ಮೆ ಆ ಊರಿನ ಹೂಹಣ್ಣಿನ ತೋಟಗಳ ಗಿಡಮರಗಳೆಲ್ಲ ಸಭೆ ಸೇರಿ, "ಸಾಹಿತ್ಯ ಸಮ್ಮೇಳನ, ದನಗಳ ಪರಿಷೆ, ಕುರಿ ಸಂತೆ, ದೇವರ ಜಾತ್ರೆಯಂತೆ ನಾವು ಒಂದು ಸಮ್ಮೇಳನ ಮಾಡೋಣ" ಎಂದು ಚಿಂತಿಸಿದವು. ಅದಕ್ಕೊಂದು ಸಮಿತಿ ರಚನೆ ಆಗಬೇಕು. ಆ ಸಮಿತಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಕಾರ್ಯದರ್ಶಿಗಳು ಮೊದಲಾದವರು ಯಾರಾಗಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು.

ಆಗ ಅಲ್ಲಿಗೆ ಬಂದ ದುಂಬಿಯನ್ನು ಕಂಡು ಗಿಡಮರಗಳು ಹೇಳಿದವು, "ನಮ್ಮಲ್ಲಿ ಎಲ್ಲರ ಪರಿಚಯ ಈ ದುಂಬಿಗಿದೆ. ಇದು ಸಮಿತಿಯಲ್ಲಿ ಯಾರಾರು ಇರಬೇಕೆಂದು ತೀರ್ಮಾನಿಸಲಿ" ಎಂದು ನಿರ್ಧರಿಸಿದವು.

ಆಗ ದುಂಬಿ ಹೇಳಿತು, "ದ್ರಾಕ್ಷಿ ಗೊಂಚಲು ಗೊಂಚಲಾಗಿ ಬಿಡುತ್ತವೆ. ಜನ ದ್ರಾಕ್ಷಿ ಗೊಂಚಲನ್ನು ನೀಡುತ್ತಾರೆ. ಒಂದೊಂದೇ ದ್ರಾಕ್ಷಿಯನ್ನು ನೀಡುವುದಿಲ್ಲ, ಉಳಿದ ಹಣ್ಣುಗಳನ್ನು ಒಂದೊಂದೇ ನೀಡುತ್ತಾರೆ. ಲೋಕದಲ್ಲಿ ಒಟ್ಟಿಗೆ ದಾನ ಮಾಡುವುದು ಕಷ್ಟ. ಆದ್ದರಿಂದ ದ್ರಾಕ್ಷಿ ಅಧ್ಯಕ್ಷನಾಗಲಿ. ಕುಂಬಳಕಾಯಿ ಗೀರು ಗೀರಾಗಿ ಹಲವು ಭಾಗಗಳಾಗಿರುತ್ತದೆ ಆದರೆ ಗಾತ್ರದಲ್ಲಿ ದೊಡ್ಡದು. ದಾನದ



ಉತ್ತಮ ಪ್ರಮಾಣಕ್ಕೆ ಸಾಕ್ಷಿ ಅದು. ಆದ್ದರಿಂದ ಉಪಾಧ್ಯಕ್ಷರಾಗಲಿ". ಆಗ ಸೇಬು ಮಾವುಗಳು ಆಕ್ಷೇಪಣೆ ಮಾಡಿ, "ನಾವೂ ಅರ್ಹರಿದ್ದೇವೆ. ಚುನಾವಣೆ ಮಾಡಿ" ಎಂದವು. ಅದಕ್ಕೆ ದುಂಬಿ, "ಚುನಾವಣೆ ನಮ್ಮಂಥ ಸಜ್ಜನರಿಗೆ ಒಳ್ಳೆಯದಲ್ಲ, ಪಟ್ಟಣದ ಜನರಿಗೆ ಸರಿ. ನಾವು ಯಾರೂ ಶ್ರೀಮಂತರಲ್ಲ, ಅನ್ಯಾಯದಲ್ಲಿ ಸಂಪಾದಿಸಿಲ್ಲ, ಲಂಚ ನಮಗೆ ಗೊತ್ತಿಲ್ಲ, ಸ್ಪರ್ಧೆಯಿಂದ ವೈರ ಬರುತ್ತದೆ. ಆದ್ದರಿಂದ ಚುನಾವಣೆ ಬೇಡ. ಸೇಬು, ಮಾವುಗಳನ್ನು ಕಾರ್ಯದರ್ಶಿಗಳನ್ನಾಗಿ ಮಾಡೋಣ" ಎಂದಿತು. ಎಲ್ಲರೂ, "ಹೂ" ಎಂದು ಒಪ್ಪಿದರು. "ಇನ್ನು ಪಾರಿಜಾತ, ತುಂಬೆ, ಮಲ್ಲಿಗೆ, ಸೇವಂತಿಗೆ ಹೂಗಳು ದೇವರಿಗೆ ಅರ್ಪಿಸುವ ದಿವ್ಯಪುಷ್ಪಗಳು ಅವು ಸಮಿತಿಯ ಸದಸ್ಯರಾಗಲಿ" ಎಂದಾಗ ಎಲ್ಲರಿಗೂ ಸಂತೋಷವಾಯಿತು. "ಮುಳ್ಳಿದ್ದರೂ ನಾವೂ ಶ್ರೇಷ್ಠ ಪುಷ್ಪಗಳೇ" ಎಂದು ಕೆರಳಿದ, ಗುಲಾಬಿಗಳು ವಾದಿಸಿದಾಗ ಅವುಗಳನ್ನು ಅಧ್ಯಕ್ಷರು ನಾಮಕರಣ ಸದಸ್ಯರನ್ನಾಗಿ ನೇಮಕ ಮಾಡಿದರು.

ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ ತೋಟದ ಮಾಲೀಕ ಆದರ್ಶ ಪ್ರಜಾಪ್ರಭುತ್ವದ ತೋಟ. ಚುನಾವಣೆಗಳಿಲ್ಲದ ಹೂ ಹಣ್ಣೂರು ಎಂಬ ಬೋರ್ಡನ್ನು ಬರೆಸಿ ಹಾಕಿದ. ಅಕ್ಕಪಕ್ಕದ ಊರಿನವರೆಲ್ಲಾ "ನಮ್ಮೂರ ತೋಟಗಳೂ ಹೀಗಾಗಬಾರದೇ" ಎಂದುಕೊಂಡವು.

25 ಅಸೂಯೆ ತೊರೆದ ಗಿಡಮರಗಳು



ಸರ್ವಋತುಪುರ ಎಂಬ ನಗರದಲ್ಲಿ ಎಲ್ಲ ಬಗೆಯ ಗಿಡಮರ ಬಳ್ಳಿಗಳು ಎಲ್ಲ ಕಾಲದಲ್ಲೂ ಹಣ್ಣು ಹೂ ಕಾಯಿ ಕೊಡುತ್ತಿದ್ದವು. ಬೇರೆ ಪ್ರದೇಶಗಳಲ್ಲಿ ಬೆಳೆಯುವ ಗಿಡಮರಗಳು ಆಯಾ ಕಾಲಕ್ಕೆ ತಕ್ಕಂತೆ ಹಣ್ಣು ಹೂ ಕಾಯಿಗಳನ್ನು ಬಿಡುತ್ತಿದ್ದವು. ಇದಕ್ಕೆ ನೆಲಗುಣ ಕಾರಣ ಎಂದರೆ ಮತ್ತೆ ಕೆಲವರು ಜಲಗುಣ, ಹವಾಮಾನ ಕಾರಣ ಎನ್ನುತ್ತಿದ್ದರು. ಆದರೆ ಬಹಳ ಜನ ಸರ್ವಋತುಪುರದಲ್ಲಿದ್ದ ಶಾಕಂಬರಿದೇವಿಯ ಮಹಿಮೆ ಅನುಗ್ರಹ ಎಂದು ಹೇಳುತ್ತಿದ್ದರು. ಒಮ್ಮೆ ಈ ಗಿಡಮರಗಳಿಗೆ ಪರಸ್ಪರ ಹೊಟ್ಟೆಕಿಚ್ಚು ಉಂಟಾಯಿತು. ಬಳ್ಳಿಯ ದ್ರಾಕ್ಷಿಯು, "ನಾನು ಬಳ್ಳಿ, ಕುಂಬಳವು ಬಳ್ಳಿ ಆದರೆ ನಾನೆಷ್ಟು ಪುಟ್ಟ ಹಣ್ಣು ಅದರ ಕುಂಬಳಕಾಯಿ ಎಷ್ಟು ದೊಡ್ಡದು!" ಎಂದು ಕೊರಗತೊಡಗಿತು. ತುಂಬೆ ಹೂ, "ನಾನು ಬೆಳ್ಳಗಿದ್ದೇನೆ, ಮಲ್ಲಿಗೆಯೂ ಬೆಳ್ಳಗಿದೆ, ಆದರೆ ಮಲ್ಲಿಗೆಗೆ ಇರುವ ಜನಪ್ರಿಯತೆ ನನಗಿಲ್ಲವಲ್ಲ" ಎಂದು ದುಃಖಿಸತೊಡಗಿತು. ಮರಸೇಬು, "ನಾನೂ ಸೇಬುಜಾತಿಯವನೇ, ಆದರೆ ಸೇಬನ್ನು 'ಹಣ್ಣಿನ ರಾಜ' ಎನ್ನುತ್ತಾರೆ, ನನ್ನ ಕಡೆ ಗಮನಿಸುವವರೇ ಇಲ್ಲ" ಎಂದು ಸೇಬಿನ ಬಗ್ಗೆ ಅಸೂಯೆಪಟ್ಟಿತು. ಹೀಗೆ ಹೂ ಹಣ್ಣುಗಳಲ್ಲಿ ಒಂದನ್ನು ನೋಡಿ ಮತ್ತೊಂದರ ಹಿರಿಮೆ ಬಗ್ಗೆ ಕರುಬತೊಡಗಿದವು.

ಸರ್ವಋತುಪುರದ ತೋಟದ ಜನರಿಗೆ ಈ ಹೂ ಹಣ್ಣುಗಳ ಅಸೂಯೆ ತಿಳಿಯಲಿಲ್ಲ. ಹೀಗಿರಲು ಒಮ್ಮೆ ದಿವ್ಯಜ್ಞಾನಾನಂದ ಮಹರ್ಷಿಗಳು ಅಲ್ಲಿಗೆ ಭೇಟಿಕೊಟ್ಟಾಗ ಈ ಅಸೂಯೆ ಅವರ ಗಮನಕ್ಕೆ ಬಂದಿತು.

ಆಗ ಆ ಹಣ್ಣು ಹೂ ಕಾಯಿಗಳನ್ನೆಲ್ಲ ಅದೃಶ್ಯ ರೂಪದಲ್ಲಿ ವಾತ್ಸಲ್ಯ ಮರದ ಅಜ್ಜಿ ಮನೆಗೆ ಹೋಗುವಂತೆ ಮಾಡಿದರು. ಅಲ್ಲಿ ಒಬ್ಬ ತಾಯಿ, ತನ್ನ ಮಕ್ಕಳನ್ನು ಹತ್ತಿರ ಕೂಡಿಸಿಕೊಂಡು ಮಕ್ಕಳಿಗೆ ಬೇರೆ ಬೇರೆ ರೀತಿಯಲ್ಲಿ ಊಟ ಬಡಿಸುತ್ತಿದ್ದಳು. ಒಬ್ಬನಿಗೆ ಗಂಜಿ; ಇನ್ನೊಬ್ಬನಿಗೆ ಚಿರೋಟಿ; ಮತ್ತೊಬ್ಬನಿಗೆ ಅನ್ನ ಸಾರು; ಮಗದೊಬ್ಬನಿಗೆ ವಾರದ ತಿಂಡಿ ಬಡಿಸುತ್ತಿದ್ದಳು. ಕೆಲವರಿಗೆ ಒಮ್ಮೆ ಮಾತ್ರ ಬಡಿಸಿದಳು ಮತ್ತೆ ಕೆಲವರಿಗೆ ಹಲವು ಸಲ ಬಲವಂತ ಮಾಡಿ ಬಡಿಸಿದಳು. ಎಲ್ಲರೂ ಊಟ ಮಾಡಿ ಖುಷಿಯಿಂದ ಮೇಲಿದ್ದು ಕೈ ತೊಳೆದುಕೊಂಡರು.



ಅದೃಶ್ಯ ಅತಿಥಿಗಳಿಗೆ ಆಶ್ಚರ್ಯವಾಯಿತು. ಆ ಮಕ್ಕಳಲ್ಲಿ ಕೆಲವರು ಚಿಕ್ಕವರು, ಕೆಲವರು ದೊಡ್ಡವರು, ಕೆಲವರು ಗಿಡ್ಡರು, ಕೆಲವರು ಲಂಬೂಗಳು ಇದ್ದರು. ತಾಯಿ ಆ ಮಕ್ಕಳ ಆರೋಗ್ಯ-ಅಭಿರುಚಿ ತಿಳಿದುಕೊಂಡು ಬಡಿಸಿದ್ದಳು. ಸಿಹಿ ಪ್ರಿಯನಿಗೆ ಲಾಡು, ಜಾಮೂನು; ಕಾಯಿಲೆ ಇದ್ದವನಿಗೆ ಗಂಜಿ; ಹೊಟ್ಟೆಬಾಕನಿಗೆ ಬಲವಂತ ಮಾಡಿ ಹಲವು ಸಲ ಬಡಿಸಿದ್ದಳು. ಹಸಿವು ಅಷ್ಟಾಗಿ ಇಲ್ಲದವರನ್ನು ಮುಖ ನೋಡಿ ತಿಳಿದು ಒಂದೇ ಸಲ ಬಡಿಸಿದರೆ, ಹಸಿವಿದ್ದವನಿಗೆ ಹಲವು ಸಲ ಬಡಿಸಿದ್ದಳು. ಹೊರನೋಟಕ್ಕೆ ಅಮ್ಮ ಮಕ್ಕಳಿಗೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಬಡಿಸಿ ಎಲ್ಲರೂ ತನ್ನ ಮಕ್ಕಳೇ ಆದರೂ ಪಕ್ಷಪಾತದಿಂದ ವರ್ತಿಸಿದಂತೆ ಕಾಣಿಸಿತು. ಆದರೆ ಒಳನೋಟದಲ್ಲಿ ತಾಯಿ ಅವರವರ ದೇಹಧರ್ಮ, ಮನೋಧರ್ಮಕ್ಕೆ ತಕ್ಕಂತೆ ಪ್ರೀತಿಯಿಂದ ಎಲ್ಲರಿಗೂ ಬಡಿಸಿದ್ದಳು. ಯಾವ ಮಕ್ಕಳೂ, "ಅವನಿಗೆ ಗಂಜಿ, ಇವನಿಗೆ ಚಿರೋಟಿ, ಅವನಿಗೆ ಒಂದು ಸಲ, ಇವನಿಗೆ ಹಲವು ಸಲ" ಎಂದು ಅಸೂಯೆಪಡಲಿಲ್ಲ, ತಮ್ಮ ತಮ್ಮ ಪಾಡಿಗೆ ಹೊಟ್ಟೆ ತುಂಬ ಊಟ ಮಾಡಿ ಖುಷಿಯಿಂದ ಎದ್ದರು.

ಮರಗಿಡಗಳಿಗೆ ಅರ್ಥವಾಯಿತು. ಪ್ರಕೃತಿಯಲ್ಲಿ ದೇವರು ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆ ಗುಣಮಟ್ಟ ಗಾತ್ರದಲ್ಲಿ ತಮ್ಮನ್ನು ಸೃಷ್ಟಿಸಿದ್ದಾನೆ. ತಾವೆಲ್ಲ ಬಣ್ಣ, ಗುಣ, ಆಕಾರ, ಗಾತ್ರಗಳಲ್ಲಿ ಇತರರೊಂದಿಗೆ ಹೋಲಿಸಿ ಅಸೂಯೆಪಡಬಾರದು, ದುಃಖಿಸ ಬಾರದು ಎಂಬ ನೀತಿಪಾಠ ಕಲಿತವು. ಅಂದಿನಿಂದ ನಗುನಗುತ ಎಲ್ಲ ಹೂಹಣ್ಣುಗಳು ಸರ್ವಋತುಪುರದಲ್ಲಿ ಬೆಳೆದವು.

26 ಅಕ್ಷಯ ಮರದ ಕಥೆ



ಭುವನ ಮರದಕಾಡು ತುಂಬ ಪ್ರಸಿದ್ಧ ಕಾಡು. ಏಕೆಂದರೆ ಜಗತ್ತಿನಲ್ಲಿ ಇರುವ ಹಣ್ಣಿನ ಮರಗಳೆಲ್ಲ ಒಂದೆಡೆ ಆ ಕಾಡಿನಲ್ಲಿದ್ದವು. ಅಲ್ಲಿದ್ದ ಮರಗಳಲ್ಲಿ ಅಕ್ಷಯ ಮರ ಎಂಬ ವಿಶೇಷ ಜಾತಿಯ ಮರ ಇತ್ತು. ಅದು ಮಾವಿನ ಹಣ್ಣಿನ ಹಾಗೆ ಹಣ್ಣು ಬಿಡುತ್ತಿತ್ತು, ಆದರೆ ಗಾತ್ರದಲ್ಲಿ ಚಕ್ಕೋತದ ಗಾತ್ರ ಇರುತ್ತಿತ್ತು. ಆಕರ್ಷಕ ಬಂಗಾರದ ಬಣ್ಣದ ಸಿಪ್ಪೆ ಹೊಂದಿತ್ತು. ಒಳಗಿನ ತಿರುಳು ಸಕ್ಕರೆ ಪಾಕದಂತಿತ್ತು, ಅದರ ಬೀಜವಂತೂ ಗೋಡಂಬಿಯಂತೆ ರುಚಿಯಾಗಿರುತ್ತಿತ್ತು. ಅದು ಹೀಚಾಗಿದ್ದಾಗಲೂ ಸಿಹಿಯಾಗಿರುತ್ತಿತ್ತು. ಆದರೆ ಹೀಚುಹಣ್ಣುಗಳೆಲ್ಲ ಅತಿ ಎತ್ತರದ ಭಾಗದಲ್ಲಿ ಬಿಡುತ್ತಿದ್ದವು. ತನ್ನ ಸುತ್ತಮುತ್ತ ಇರುವ ಗಿಡಮರಗಳಿಗೆ ಅಜ್ಜನಂತೆ ತಾನಿದ್ದು ಉಳಿದ ಮರಗಳನ್ನು ತನ್ನ ಮಕ್ಕಳು ಮೊಮ್ಮಕ್ಕಳಂತೆ ನೋಡಿಕೊಳ್ಳುತ್ತಿತ್ತು. ಇನ್ನೊಂದು ವಿಶೇಷವೆಂದರೆ ಈ ಹಣ್ಣನ್ನು ತಿಂದರೆ ಚಿಕ್ಕವರಿಗೆ, ಹಣ್ಣನ್ನು ತಿಂದರೆ ಹಿರಿಯರಿಗೆ ಕಾಯಿಲೆ ಬರುವುದಿಲ್ಲ ಎಂಬ ಸುದ್ದಿ ಹರಡಿತು.

ಜನ ಗುಂಪು ಗುಂಪಾಗಿ ಬಂದು ದಿನವೂ ಮರಕ್ಕೆ ಹುಡುಗರಿಂದ ಮುದುಕರವರೆಗೆ ಎಲ್ಲರೂ ಒಂದೇ ಸಮನೆ ಕಲ್ಲು ಹೊಡೆಯುತ್ತಾ ಹಣ್ಣು ಕಾಯಿ ಉದುರಿಸುತ್ತಾ ಮರಕ್ಕೆ ಗಾಯಮಾಡುತ್ತಾ ಪೆಟ್ಟುಕೊಡುತ್ತಿದ್ದರು. ಇದರಿಂದ ರೋಸಿಹೋಗಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದಾಗ ಬ್ರಹ್ಮ ಪ್ರತ್ಯಕ್ಷನಾಗಿ, "ಏನು ವರ ಬೇಕು" ಎಂದು ಕೇಳಿದ. "ನನ್ನಲ್ಲಿ ಸಿಹಿಹಣ್ಣು ಇರುವುದರಿಂದ ಜನ ಹಿಂಸಿಸುತ್ತಿದ್ದಾರೆ. ನನ್ನ ಹಣ್ಣುಗಳನ್ನು ಕಹಿ ಮಾಡು" ಎಂದಿತು.



ಅದಕ್ಕೆ ಬ್ರಹ್ಮ, "ಚೆನ್ನಾಗಿ ಯೋಚಿಸು. ಆರು ತಿಂಗಳ ನಂತರ ಮತ್ತೆ ಬರುತ್ತೇನೆ. ಇವತ್ತಿನಿಂದ ನಿನ್ನ ಹಣ್ಣುಗಳೆಲ್ಲ ಬೇವಿನಕಾಯಿಗಿಂತ ಹೆಚ್ಚು ಕಹಿಯಾಗಿರುತ್ತವೆ" ಎಂದು ವರ ಕೊಟ್ಟನು.

ಅಕ್ಷಯ ಮರದ ಹಣ್ಣುಗಳು ಕಹಿಯಾಗಿದ್ದು ತಿಂದವರಿಗೆಲ್ಲ ವಾಂತಿ ಆಗಲು ಶುರುವಾಯಿತು. ಆಗ ಆ ಸುದ್ದಿ ಕೇಳಿ ಮರವನ್ನು ಕಡಿದುಹಾಕಲು ರಾಜ ಆಜ್ಞೆ ಮಾಡಿದ. ಆ ಸುದ್ದಿ ಕೇಳಿ ಅಕ್ಷಯ ಮರ ಬ್ರಹ್ಮನನ್ನು ಕುರಿತು ಮತ್ತೆ ತಪಸ್ಸು ಮಾಡಿ, "ಕಾಪಾಡಿ ನನ್ನನ್ನು" ಎಂದಿತು. ಆಗ ಬ್ರಹ್ಮ ಹೇಳಿದ, "ಗಿಡಮರಗಳು ಜನಕ್ಕೆ ಸಂತೋಷ ಕೊಡಬೇಕು. ಸುಖ ಕೊಡಬೇಕು ಅಂತ ಸುಂದರ ಹೂವು ಹಾಗೂ ರುಚಿ ಕೊಡುವ ಹಣ್ಣುಗಳನ್ನು ಗಿಡಮರಗಳಲ್ಲಿ ಇಟ್ಟಿದ್ದೇನೆ. ಜನ ಅದನ್ನು ಪಡೆಯಲು ಹಣ್ಣಿಗೆ ಕಲ್ಲು ಹೊಡೆಯುವುದು, ಹೂವನ್ನು ದೋಟಿಯಲ್ಲಿ ಕೀಳುವುದರಿಂದ ನೋವಾಗುವುದು ಸಹಜ. ಆದರೆ ಇದು ಪ್ರಕೃತಿ ನಿಯಮ. ಪರೋಪಕಾರವಾಗುತ್ತಿದೆ ಎಂದು ಗಿಡಮರಗಳು ಭಾವಿಸಿದಾಗ ನೋವು ತಿಳಿಯುವುದಿಲ್ಲ" ಎಂದಾಗ ಅಕ್ಷಯ ಮರಕ್ಕೆ ಜ್ಞಾನೋದಯವಾಯಿತು. "ಬ್ರಹ್ಮ ನನಗೆ ಮೊದಲಿನ ಹಾಗೆ ಸಿಹಿ ಹಣ್ಣು ಬಿಡುವ ಹಾಗೆ ಮಾಡು. ತಾಯಿ ಕಷ್ಟಪಟ್ಟರೂ ಮಕ್ಕಳ ಸುಖ ಕಂಡು ಸಂತೋಷಪಡುವ ಹಾಗೆ ನಾನಿರುತ್ತೇನೆ" ಎಂದಿತು

27 ಹೂಪುರ-ಕಲ್ಲುಪುರಗಳ ಕಥೆ



ಕಾಡೂರು-ನಾಡೂರು ರಾಜ್ಯಗಳು ಅಕ್ಕಪಕ್ಕದಲ್ಲಿದ್ದವು. ಕಾಡು ಜಾಸ್ತಿ ಇದ್ದುದರಿಂದ ಕಾಡೂರು, ನಾಡು ಬೆಳೆದಿದ್ದರಿಂದ ನಾಡೂರು ಎಂದು ಜನ ಕರೆಯುತ್ತಿದ್ದರು. ನಾಡೂರಿನಲ್ಲಿ ಹೂದೋಟಗಳು ಜಾಸ್ತಿ ಇದ್ದುದರಿಂದ ಅದರ ರಾಜಧಾನಿಗೆ ಹೂಪುರ ಎಂದು ಹೆಸರಿತ್ತು. ಕಾಡೂರು ರಾಜ್ಯದಲ್ಲಿ ನಾನಾ ಬಗೆಯ ಕಲ್ಲು ಗುಡ್ಡಗಳು ಅಪಾರವಾಗಿ ಇದ್ದುದರಿಂದ ಅದರ ರಾಜಧಾನಿಗೆ ಕಲ್ಲುಪುರ ಎಂದು ಕರೆಯುತ್ತಿದ್ದರು.

ಒಮ್ಮೆ ಕಾಡೂರಿನ ಜನರಿಗೂ ನಾಡೂರಿನ ಜನರಿಗೂ ಭಾರಿ ಜಗಳವಾಯಿತು. ಒಬ್ಬರು ಇನ್ನೊಬ್ಬರ ಊರನ್ನು ಹಂಗಿಸತೊಡಗಿದರು. ನಾಡೂರಿನ ಜನ ಹೇಳಿದರು, "ನಿಮ್ಮೂರಿನಲ್ಲಿ ಬರೀ ಬಂಡೆಗಳು, ಗುಡ್ಡಗಳು, ಮರಡಿಗಳೇ ಇವೆ. ಗಾತ್ರದಲ್ಲೂ ಅಂದ ಚಂದಗಳಿಲ್ಲ. ವಕ್ರ ವಕ್ರ ಸುಗಂಧವಿಲ್ಲ, ಸುಂದರವಿಲ್ಲ. ಯಾರು ತಾನೇ ನಿಮ್ಮ ಊರನ್ನು ಇಷ್ಟಪಡುತ್ತಾರೆ. ಈಗಿರುವವರೆಲ್ಲ ಅರಸಿಕರು. ಚೆಲುವು ಅಂದರೇನು ಅವರಿಗೆ ಗೊತ್ತಿಲ್ಲ." ಕಾಡೂರಿನ ಜನ

ಹೇಳಿದರು, "ನಿಮ್ಮಲ್ಲಿರುವ ಹೂಗಿಡ ಮರಗಳೆಲ್ಲ ಮೇಲೆ ಥಳುಕು ಒಳಗೆ ಹುಳುಕು ಎಂಬಂತೆ. ಎಲೆಗಳು ಒಣಗುತ್ತವೆ, ಉದುರುತ್ತವೆ. ಎಲ್ಲೆಲ್ಲೂ ಕಸವೋ ಕಸ. ಹಣ್ಣುಗಳು, ಎಲೆಗಳು ಉದುರುತ್ತವೆ. ಕೊಳೆಯುತ್ತವೆ. ವಾಸನೆಯೋ ದುರ್ವಾಸನೆ. ಇನ್ನು ಬಾಳಿಕೆ ಇಲ್ಲ. ಹೂಗಳ ಜೀವ ಕೆಲವೇ ಗಂಟೆಗಳು. ಆಮೇಲೆ ಅವು ಹೆಣಗಳು...." ಇತ್ಯಾದಿ ಹಂಗಿಸಿದರು.



ಆಗ ಋಷಿ ಪರಿವಾರದೊಡನೆ ಶಿಲ್ಪಿಗಳ ತಂಡವೊಂದು ಪ್ರವಾಸ ಮಾಡುತ್ತಾ ಬಂತು. ಋಷಿಗಳು, "ತಪಸ್ಸಿಗೆ ಜಾಗ ಚೆನ್ನಾಗಿದೆ" ಎಂದು ಕಾಡೂರಿನಲ್ಲಿ ನಿಂತರು. ಶಿಲ್ಪಿಗಳು ಅಲ್ಲಿದ್ದ ದೊಡ್ಡ ಬಂಡೆಗಳಲ್ಲಿ ದೇವರ ವಿಗ್ರಹಗಳನ್ನು ಕೆತ್ತಿದರು. ಪೂಜೆಗೊಂಡು ಹೂಪುರದವರು ಹೂಗಳನ್ನು ತಂದು ಪೂಜಿಸತೊಡಗಿದರು. ಹೂಪುರ ಮತ್ತು ಕಲ್ಲುಪುರದವರು ಒಬ್ಬರನ್ನೊಬ್ಬರು ಹಂಗಿಸುವುದನ್ನು ಬಿಟ್ಟು ದೈವಭಕ್ತರಾದರು. ಸಜ್ಜನರಾದರು..



ಬೆಂಗಳೂರು ಕನ್ನಡಿಗ, ಕನ್ನಡ ಲೇಖಕ, ವಾಗ್ಮಿ, ಅಧ್ಯಾಪಕ, ಸಂಶೋಧಕ, ವಿದ್ವಾಂಸ, ಮಾರ್ಗದರ್ಶಕ, ಕನ್ನಡ ಸಂಸ್ಥೆಗಳಲ್ಲಿ ಸೇವಾ ಧುರೀಣರಾಗಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕನ್ನಡ ನಾಡು ನುಡಿಗೆ ಕಳೆದ 70 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. 30 ವರ್ಷಗಳ ಕಾಲ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ/ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನೂರಾರು ಆಡಳಿತ ಕನ್ನಡ ಶಿಬಿರಗಳನ್ನು ನಿರ್ವಹಿಸಿ ಕನ್ನಡ ಕಲಿಸಿದ್ದಾರೆ. ಅಮೆರಿಕಾದಲ್ಲಿ ಕನ್ನಡ ಮಕ್ಕಳಿಗೆ ಕನ್ನಡ ಕಲಿಸಿದ್ದಾರೆ.

ಕರ್ನಾಟಕ ಸರ್ಕಾರ ಪ್ರಕಟಿಸಿರುವ 50 ಸಂಪುಟಗಳ ಸಮಗ್ರ ದಾಸಸಾಹಿತ್ಯದ ಸಹ ಸಂಪಾದಕರಾಗಿ ಗ್ರಂಥಗಳನ್ನು ಅಚ್ಚಿಗೆ ಸಿದ್ಧಪಡಿಸಿದ್ದಾರೆ. ನಾಡಿನಾದ್ಯಂತ ಕನ್ನಡ ನಾಡುನುಡಿಗಳ ಬಗ್ಗೆ ಸಾವಿರಾರು ಉಪನ್ಯಾಸ ನೀಡಿದ ವಾಗ್ಮಿಗಳಾಗಿದ್ದಾರೆ. ಈಗ ಗಿಡಮರಬಳ್ಳಿಗಳ ಮೂಲಕ ನೀತಿಕತೆಗಳನ್ನು ಮಕ್ಕಳಿಗಾಗಿ ವಿಶಿಷ್ಟವಾಗಿ ಬರೆದಿದ್ದಾರೆ. ಮಕ್ಕಳು, ಹಿರಿಯರಾಗಿ ಓದುವಂತಹ ಮೌಲ್ಯಯುತ ಪುಸ್ತಕ "ಗಿಡಮರಬಳ್ಳಿಗಳ ನೀತಿಕತೆಗಳು".

ಬೆಲೆ : 145/-